# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಡಿಸೆಂಬರ್ 19, 2021

ಸಂಪುಟ : 48 ಸಂಚಿಕೆ : 218 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




## ಮರುಳಸಿದ್ದೇಶ್ವರ ಕಾರ್ತಿಕ

ದಾವಣಗೆರೆ, ಡಿ.18- ನಗರದ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ಸ್ಥಾಪಿತವಾದ ವಿಶ್ವಬಂಧು ಶ್ರೀ ಮರುಳಸಿದ್ಧೇಶ್ವರರ ಕಾರ್ತಿಕೋತ್ಸವ ವಿಜೃಂಭಣೆಯಿಂದ ಜರುಗಿತು. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಜನತಾವಾಣಿ ಸಂಪಾದಕರಾದ ಎಂ.ಎಸ್. ವಿಕಾಸ್, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಗೀತಾ ದಿಳ್ಳೆಪ್ಪ, ಶ್ರೀಮತಿ ಗೌರಮ್ಮ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಶ್ರೀಮತಿ ಸುಮತಿ ಜಯ್ಯಪ್ಪ, ಲೋಕಿಕೆರೆ ನಾಗರಾಜ್ ಹಾಗೂ ಕಾರ್ತಿಕೋತ್ಸವ ಸಮಿತಿ ಸದಸ್ಯರು ಮತ್ತು ಸರ್ವ ಭಕ್ತಾದಿಗಳೊಡಗೂಡಿ ಸಹಸ್ರ ದೀಪೋತ್ಸವ ಬೆಳಗಿಸುವ ಮೂಲಕ ಭಕ್ತಿ ಸಮರ್ಪಿಸಿದರು.

# ರಾಯಣ್ಣ ಪ್ರತಿಮೆ ಭಗ್ನ

## ಸರ್ಕಾರಿ ವಾಹನಗಳಿಗೆ ಕಲ್ಲು, ಬೆಳಗಾವಿಯಲ್ಲಿ ದುಷ್ಕೃತ್ಯದ ನಂತರ ನಿಷೇಧಾಜ್ಞೆ ಜಾರಿ, 27 ಜನರ ಬಂಧನ

ಬೆಳಗಾವಿ, ಡಿ. 18 - ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನ ಹಾಗೂ ಸರ್ಕಾರಿ ವಾಹನಗಳ ಮೇಲೆ ಕಲ್ಲು ತೂರಿದ ಘಟನೆಗಳ ನಂತರ ಬೆಳಗಾವಿ ನಗರ ಹಾಗೂ ತಾಲ್ಲೂಕಿನಲ್ಲಿ ನಿಷೇಧಾಜ್ಞೆ ಹೇರಲಾಗಿದೆ.

ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವ ಮಧ್ಯೆಯೇ ಪ್ರಕ್ಷುಬ್ಧಗೊಳಿಸುವ ಘಟನೆಗಳು ನಡೆದಿವೆ.

ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಿದ ಘಟನೆಗೆ ಸಂಬಂಧಿಸಿದಂತೆ 27 ಮಂದಿಯನ್ನು ಬಂಧಿಸಲಾಗಿದೆ. ಸರ್ಕಾರದ ಮತ್ತು ಬೆಳಗಾವಿಯ ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಸುಮಾರು 26 ವಾಹನಗಳನ್ನು ಪುಂಡರು ಧ್ವಂಸಗೊಳಿಸಿದ್ದರು ಎಂದು ಬೆಳಗಾವಿ ಪೊಲೀಸ್ ಆಯುಕ್ತ ಕೆ. ತ್ಯಾಗರಾಜನ್ ತಿಳಿಸಿದ್ದಾರೆ.

**ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಅವರ ಪ್ರತಿಮೆಗೆ ಮಸಿ ಬಳಿಯಲಾಗಿತ್ತು. ತಕ್ಷಣವೇ ಈ ಬಗ್ಗೆ ಪೊಲೀಸರು ಕ್ರಮ ತೆಗೆದುಕೊಂಡಿದ್ದು, ಪ್ರತಿಮೆಗೆ ಭದ್ರತೆ ಕಲ್ಪಿಸಿದ್ದರು. ಇದರ ಬೆನ್ನಲ್ಲೇ ಬೆಳಗಾವಿಯಲ್ಲಿ ದುಷ್ಕೃತ್ಯಗಳನ್ನು ನಡೆಸಲಾಗಿದೆ.**

ಬೆಳಗಾವಿ ನಗರದ ಅನಗೋಳದ ಕನಕದಾಸರ ಕಾಲೋನಿಯಲ್ಲಿ ನಸುಕಿನ ಜಾವ ಕಿಡಿಗೇಡಿಗಳು ಸಂಗೊಳ್ಳಿ ರಾಯಣ್ಣ ಪುತ್ಥಳಿ ವಿರೂಪಗೊಳಿಸಿದ್ದರು. ಸಂಗೊಳ್ಳಿ ರಾಯಣ್ಣ ಪುತ್ಥಳಿ ಹಾನಿಗೊಳಿಸಿ ಖಡ್ಗ, ಗುರಾಣಿ ಬೇರೆ ಬೇರೆ ಕಡೆ ಇಟ್ಟು ವಿಕೃತಿ ಮೆರೆದಿದ್ದಾರೆ.

ನಂತರ ಸ್ಥಳದಲ್ಲಿ ತೀವ್ರ ಗಲಾಟೆ, ಗದ್ದಲ ನಡೆದಿದೆ. ಕರ್ನಾಟಕ ಸರ್ಕಾರದ ಪೊಲೀಸ್ ಇಲಾಖೆಯ ವಾಹನಗಳನ್ನು ಗುರಿಯಾಗಿಟ್ಟುಕೊಂಡು ಪುಂಡರು ಕಲ್ಲು ತೂರಾಟ ನಡೆಸಿದ್ದಾರೆ. ದುರ್ಘಟನೆಯಲ್ಲಿ ಅನೇಕ ಕಾರುಗಳು ಪುಡಿಯಾಗಿವೆ. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ತಪ್ಪಿತಸ್ಥರನ್ನು ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಬಿಡುವುದಿಲ್ಲ. ಇಂತಹ ಘಟನೆ ಮರುಕಳಿಸದಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಇಂತಹ ಪುಂಡಾಟಗಳನ್ನು ಹತ್ತಿಕ್ಕುತ್ತೇವೆ. ಕಟ್ಟುನಿಟ್ಟಿನ ಕ್ರಮ (2ನೇ ಪುಟಕ್ಕೆ)

## ಪುಂಡರ ವಿರುದ್ಧ ಕಠಿಣ ಕ್ರಮ



ಬೆಂಗಳೂರು, ಡಿ. 18 - ರಾಷ್ಟ್ರಭಕ್ತರ ಪ್ರತಿಮೆಗಳನ್ನು ಭಗ್ನ ಮಾಡಿ, ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕದಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುಂಡ ಪೋಕರಿಗಳ ಹಾವಳಿಯನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ. ಇಂತಹವರ ಮೇಲೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಮುಂದೆಯೂ ಕೈಗೊಳ್ಳುತ್ತಾರೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಅವರ ಪ್ರತಿಮೆಗೆ ಮಸಿ ಬಳಿಯಲಾಗಿತ್ತು. ನಂತರ ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಭಗ್ನಗೊಳಿಸಲಾಗಿತ್ತು. ಕಲ್ಲು ತೂರಾಟದ ಘಟನೆಯೂ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹೇಳಿಕೆ ನೀಡಿದ್ದಾರೆ. ಶಾಂತಿ-ಸುವ್ಯವಸ್ಥೆ ಕಾಪಾಡಿ, ಜನರಿಗೆ ರಕ್ಷಣೆ ನೀಡುವುದು (2ನೇ ಪುಟಕ್ಕೆ)

## ಇದೊಂದು ನಾಡದ್ರೋಹಿ ಕೃತ್ಯ: ಡಿಕೆಶಿ

ಬೆಂಗಳೂರು, ಡಿ. 18 - ಅನಗೋಳದಲ್ಲಿ ಸ್ವಾತಂತ್ರ್ಯ ವೀರ ಸೇನಾನಿ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಭಗ್ನ ಸೇರಿದಂತೆ ಬೆಳಗಾವಿಯಲ್ಲಿ ಸಮಾಜಘಾತುಕ ಶಕ್ತಿಗಳ ಪುಂಡಾಟಿಕೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಉಗ್ರವಾಗಿ ಖಂಡಿಸಿದ್ದಾರೆ. ಇವರ ಕನ್ನಡದ್ರೋಹಿ, ನಾಡದ್ರೋಹಿ ಕೃತ್ಯವನ್ನು ಕಾಂಗ್ರೆಸ್ ಎಂದಿಗೂ ಸಹಿಸುವುದಿಲ್ಲ ಎಂದು ಅವರು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಇಂಜಿನಿಯರಿಂಗ್, ಫಾರ್ಮಸಿ, ಕೃಷಿ ಪ್ರವೇಶಾತಿ ವಿಸ್ತರಣೆ

**ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ**

ಬೆಳಗಾವಿ, ಡಿ. 18 - ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಎಂಜಿನಿಯರಿಂಗ್, ಫಾರ್ಮಸಿ, ಕೃಷಿ ಮತ್ತು ಇತರ ಕೋರ್ಸುಗಳಿಗೆ ಡಿ.31ರವರೆಗೂ ಪ್ರವೇಶಾವಕಾಶ ಕಲ್ಪಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಂಜಿನಿಯರಿಂಗ್ ಕೋರ್ಸುಗಳಿಗೆ ಪ್ರತೀ ವರ್ಷ ಜುಲೈ 31ರೊಳಗೆ ಪ್ರವೇಶಾತಿ ಮುಗಿಸುವಂತೆ ಈ ಹಿಂದೆ (2012ರಲ್ಲಿ) ಸುಪ್ರೀಂಕೋರ್ಟ್ ಆದೇಶಿಸಿತ್ತು. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಂಜಿನಿಯರಿಂಗ್ ಮತ್ತು ಫಾರ್ಮಸಿ ಕೋರ್ಸುಗಳಿಗೆ ಡಿ.31ರವರೆಗೂ ಪ್ರವೇಶ ಪಡೆಯಲು ಅವಕಾಶ ಕೊಡಬೇಕೆಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಜಿ ಸಲ್ಲಿಸಿತ್ತು. ಗುರುವಾರ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ರಾಜ್ಯದ ಮನವಿಯನ್ನು ಪುರಸ್ಕರಿಸಿದೆ ಎಂದು ತಿಳಿಸಿದರು.

ಸುಪ್ರೀಂ ಕೋರ್ಟಿನ ಆದೇಶದಂತೆ ಇದೇ ತಿಂಗಳ 31ರೊಳಗೆ ಎಂಜಿನಿಯರಿಂಗ್ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಮುಗಿಸಬೇಕಾಗಿದೆ. ಹೀಗಾಗಿ ವೈದ್ಯಕೀಯ ಸೀಟು ಹಂಚಿಕೆಯ ನಂತರ ಖಾಲಿ ಉಳಿದ ಎಂಜಿನಿ (2ನೇ ಪುಟಕ್ಕೆ)

## ಜಗಳೂರು: ವಿದ್ಯುತ್ ಪ್ರಸರಣದ ಟವರ್ ಅಳವಡಿಕೆ

# ರೈತರಿಗೆ ಸೂಕ್ತ ಪರಿಹಾರಕ್ಕೆ ನಿರ್ಧಾರ



ಜಗಳೂರು, ಡಿ.18- ತಾಲ್ಲೂಕಿನಲ್ಲಿ ಕೇಂದ್ರ ವಿದ್ಯುತ್ ಪ್ರಸರಣ ನಿಗಮದ ಸಹಯೋಗದಲ್ಲಿ 220 ಮೆಗಾವ್ಯಾಟ್ ವಿದ್ಯುತ್ ಪ್ರಸರಣದ ಟವರ್ ಹಾಗೂ ತಂತಿ ಅಳವಡಿಕೆ ಕಾಮಗಾರಿ ಕೈಗೊಂಡಿರುವ ರಿನ್ಯು ಕಂಪನಿಯು ರೈತರಿಗೆ ನಿಯಮಾನುಸಾರ ಹೆಚ್ಚಿನ ಪರಿಹಾರ ನೀಡಲು ಒಪ್ಪಿಕೊಂಡಿದೆ ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಇಂದು ಫಲಾನುಭವಿ ರೈತರು ಹಾಗೂ ರೈತ ಸಂಘಟನೆಗಳ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ರೈತರಿಗೆ ಖಾಸಗಿ ಕಂಪನಿಯವರು ಸಮರ್ಪಕ ಪರಿಹಾರ ನೀಡಬೇಕು. ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಶಾಸಕರು, ಸಣ್ಣ ರೈತರಿಗೆ ಅಲ್ಪಸ್ವಲ್ಪ ಭೂಮಿ ಇರುತ್ತದೆ. ಅದರಲ್ಲಿ ವಿದ್ಯುತ್ ಕಂಬ ಅಳವಡಿಸಿದರೆ ಮಾನವೀಯತೆಯಿಂದ ಹೆಚ್ಚಿನ ಪರಿಹಾರ ನೀಡಬೇಕು ಎಂದರು.

ತಾಲ್ಲೂಕಿನ 57 ಕೆರೆಗಳಿಗೆ ಡಿಸೆಂಬರ್ ಅಂತ್ಯದಲ್ಲಿ ನೀರು ತುಂಬಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಗೆ ಜ.18. ರಂದು ಭೂಮಿ ಪೂಜೆ ನಡೆಸಲಾಗುತ್ತದೆ. ಬರಪೀಡಿತ ಕ್ಷೇತ್ರದಲ್ಲಿ ಹಸಿರು ಕಂಗೊಳಿಸಲಿದೆ ಎಂದು ಶಾಸಕರು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕೇಂದ್ರ ಸರ್ಕಾರದ ನಿಯಮಾವಳಿ ಅನ್ವಯ ಹಾಗೂ ಪಕ್ಕದ ಚಿತ್ರದುರ್ಗ ಜಿಲ್ಲೆಯಲ್ಲಿ ನೀಡಿರುವ ಪರಿಹಾರದ ರೀತಿಯಲ್ಲಿ ನಮ್ಮ ತಾಲ್ಲೂಕಿನ ರೈತರಿಗೂ ಪರಿಹಾರ ನೀಡಲು ರಿನ್ಯು ಕಂಪನಿಯ ಅಧಿಕಾರಿಗಳಿಗೆ ಆದೇಶ ನೀಡಿದರು.

ಇದೇ ವೇಳೆ ಕಂಪನಿಯವರು ಯಾವುದೇ ಸೂಚನೆ ನೀಡದೆ, ಸೂಕ್ತ ಪರಿಹಾರವನ್ನೂ ನೀಡದೇ ದೌರ್ಜನ್ಯದಿಂದ ಬೆಳೆ ಹಾಳು ಮಾಡಿ ಕಂಬಗಳನ್ನು (2ನೇ ಪುಟಕ್ಕೆ)

## ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿದ ಡಿ.ಆರ್.ಡಿ.ಒ. ವಿಜ್ಞಾನಿ ಬಂಧನ

ನವದೆಹಲಿ, ಡಿ. 18 - ಟಿಫನ್ ಬಾಕ್ಸ್‌ನಲ್ಲಿ ಸುಧಾರಿತ ಸ್ಫೋಟಕವಿಟ್ಟು ನೆರೆ ಮನೆಯವನ ಹತ್ಯೆ ಮಾಡಲು ಯತ್ನ ನಡೆಸಿದ ಡಿ.ಆರ್.ಡಿ.ಒ.ದ ಹಿರಿಯ ವಿಜ್ಞಾನಿಯೊಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಡಿಸೆಂಬರ್ 9ರಂದು ಇಲ್ಲಿನ ರೋಹಿಣಿ ನ್ಯಾಯಾಲಯದಲ್ಲಿ ಸ್ಫೋಟ ನಡೆಸಲಾಗಿತ್ತು. ಘಟನೆಯಲ್ಲಿ ಓರ್ವ ವ್ಯಕ್ತಿ ಗಾಯಗೊಂಡಿದ್ದರು.

ಘಟನೆಗೆ ಸಂಬಂಧಿಸಿದಂತೆ 47 ವರ್ಷದ ಭರತ್ ಭೂಷಣ್ ಕಟಾರಿಯ ಅವರನ್ನು ಬಂಧಿಸಲಾಗಿದೆ. ಡಿ.ಆರ್.ಡಿ.ಒ. ಹಿರಿಯ ವಿಜ್ಞಾನಿಯಾಗಿರುವ ಕಟಾರಿಯ ಅವರು ಆ ದಿನದಂದು ಬೆಳಿಗ್ಗೆ 9.33ಕ್ಕೆ ನ್ಯಾಯಾಲಯಕ್ಕೆ ಬಂದಿದ್ದರು. ನ್ಯಾಯಾಲಯದ 102ರ ಸಂಖ್ಯೆಯ ಕೋಣೆಗೆ ಬರುವಾಗ ಎರಡು ಚೀಲಗಳನ್ನು ತಂದಿದ್ದ ಅವರು, ವಾಪಸ್ ಹೋಗುವಾಗ ಒಂದು ಚೀಲ ತೆಗೆದುಕೊಂಡು ಹೋಗಿದ್ದರು.

ಟಿಫನ್ ಬಾಕ್ಸ್‌ನಲ್ಲಿ ಬಾಂಬ್ ಇಟ್ಟು, ವಕೀಲನಾಗಿರುವ ನೆರೆಮನೆಯ ವ್ಯಕ್ತಿಯನ್ನು ಹತ್ಯೆ ಮಾಡಲು ಯತ್ನ ನಡೆಸಲಾಗಿತ್ತು ಎಂದು ದೆಹಲಿ ಪೊಲೀಸ್ ಆಯುಕ್ತ ರಾಕೇಶ್ ಆಸ್ಥಾನ ಹೇಳಿದ್ದಾರೆ.

ಕಟಾರಿಯ ಹಾಗೂ ವಕೀಲರು ಪರಸ್ಪರರ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಿದ್ದರು. ಇಬ್ಬರ ಮನೆಗಳೂ ಒಂದೇ ಕಟ್ಟಡದಲ್ಲಿವೆ. ವಕೀಲರ ಬಗ್ಗೆ ಕಟಾರಿಯಾಗೆ ದ್ವೇಷವಿತ್ತು ಎನ್ನಲಾಗಿದೆ. (2ನೇ ಪುಟಕ್ಕೆ)

## ರಾಜ್ಯದಲ್ಲಿ ಆರು ಓಮಿಕ್ರಾನ್ ಸೋಂಕಿತರು ಪತ್ತೆ

ಬೆಂಗಳೂರು, ಡಿ. 18 – ರಾಜ್ಯದಲ್ಲಿ ಓಮಿಕ್ರಾನ್ ರೂಪಾಂತರಿ ಸೋಂಕಿತರಾದ ಆರು ಜನರು ಕಂಡು ಬಂದಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇವರಲ್ಲಿ ಒಬ್ಬರು ಬ್ರಿಟನ್‌ನಿಂದ ಬಂದವರಾಗಿದ್ದರೆ, ಉಳಿದ ಐವರು ದಕ್ಷಿಣ ಕನ್ನಡ ಜಿಲ್ಲೆಯ ಎರಡು ಶಿಕ್ಷಣ ಸಂಸ್ಥೆಗಳಿಗೆ ಸೇರಿದವರು. ಇವರು ವಿದೇಶದಿಂದ ಬಂದವರೊಬ್ಬರ ಸಂಪರ್ಕದಲ್ಲಿದ್ದರು ಎಂದು ಆರೋಗ್ಯ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇದುವರೆಗೂ 14 ಓಮಿಕ್ರಾನ್ ಸೋಂಕಿತರು ಕಂಡು ಬಂದಿದ್ದಾರೆ.

# ಪೌರ ಕಾರ್ಮಿಕರನ್ನು ಗುರುತಿಸಿ ಸೌಲಭ್ಯ ಕಲ್ಪಿಸಲು ಸಮೀಕ್ಷೆ



**ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ**

ದಾವಣಗೆರೆ, ಡಿ. 18 – ಆಸ್ಪತ್ರೆ, ಕಾರ್ಖಾನೆ, ಮಾಲ್‌ಗಳೂ ಸೇರಿದಂತೆ ಹಲವಾರು ವಲಯಗಳಲ್ಲಿ ರಾಜ್ಯದೆಲ್ಲೆಡೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಮಾಹಿತಿ ಕಲೆ ಹಾಕಲು ಸಮೀಕ್ಷೆ ನಡೆಸಲಾಗುವುದು ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಪೌರ ಕಾರ್ಮಿಕರು ಹಲವಾರು ವಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರ ಬಗ್ಗೆ ನಿಖರ ಮಾಹಿತಿ ಇಲ್ಲ. ಹೀಗಾಗಿ ಸಮೀಕ್ಷೆ ನಡೆಸುವ ಕೆಲಸವನ್ನು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾಗೆ ವಹಿಸಲಾಗಿದೆ ಎಂದಿದ್ದಾರೆ.

ಬಾಗಲಕೋಟೆ, ಮೈಸೂರು ಹಾಗೂ ಬಳ್ಳಾರಿಗಳಲ್ಲಿ ಆರಂಭಿಕ ಹಂತದಲ್ಲಿ ಸಮೀಕ್ಷೆ ನಡೆಸಲು ತಿಳಿಸಲಾಗಿದೆ. ಎರಡು ತಿಂಗಳಲ್ಲಿ ಈ ಕುರಿತ ವರದಿ ಬರಲಿದೆ. ನಂತರ ಇಡೀ ರಾಜ್ಯದ ಮಾಹಿತಿ ಸಂಗ್ರಹಿಸಲಾಗುವುದು. ಇದರಿಂದ ಪೌರ ಕಾರ್ಮಿಕರಿಗೆ ನೆರವು ಕಲ್ಪಿಸಲು ಸಾಧ್ಯವಾಗಲಿದೆ ಎಂದು ಶಿವಣ್ಣ ಹೇಳಿದ್ದಾರೆ.

ಹೊರಗ ಗುತ್ತಿಗೆ, ನೇರ ನೇಮಕಾತಿ, ಏಜೆನ್ಸಿಗಳ ಮೂಲಕ ನೇಮಕ ಹೀಗೆ ಹಲವಾರು ವಿಧಗಳಲ್ಲಿ ನೇಮಕಗೊಂಡ ಪೌರ ಕಾರ್ಮಿಕರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಾಡುವ ಕೆಲಸ ಒಂದೇ ಆಗಿದ್ದರೂ ಸೌಲಭ್ಯಗಳಲ್ಲಿ ವ್ಯತ್ಯಾಸವಿದೆ. ಈ ಕುರಿತು ಸಮಾಜ ಕಲ್ಯಾಣ ಇಲಾಖೆಯ ಸಚಿವರ ಜೊತೆ ಚರ್ಚಿಸಲಾಗುವುದು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶವಿದೆ ಎಂದವರು ಹೇಳಿದರು.

ಮ್ಯಾನ್ಯುಯಲ್ ಸ್ಕಾವೆಂಜರ್‌ಗಳ ಕುರಿತು ರಾಜ್ಯದ 18 ಜಿಲ್ಲೆಗಳಲ್ಲಿ ಈಗಾಗಲೇ ಸಮೀಕ್ಷೆ ಪೂರ್ಣಗೊಳಿಸಲಾಗಿದೆ. ಉಳಿದ ಜಿಲ್ಲೆಗಳಲ್ಲೂ ಸಮೀಕ್ಷೆ ನಡೆಸುವ ಜೊತೆಗೆ, ಈಗಾಗಲೇ ನಡೆಸಲಾದ ಸಮೀಕ್ಷೆಯಲ್ಲಿ ಹೆಸರು ಬಿಟ್ಟಿದ್ದರೆ ಅವರ ಸೇರ್ಪಡೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಇದುವರೆಗೂ ನಡೆಸಲಾದ ಸಮೀಕ್ಷೆಯಲ್ಲಿ 5,080 ಮ್ಯಾನ್ಯುಯಲ್ ಸ್ಕಾವೆಂಜರ್‌ಗಳನ್ನು ಗುರುತಿಸಲಾಗಿದೆ. (2ನೇ ಪುಟಕ್ಕೆ)

# ಲೋಕ ಅದಾಲತ್: 5361 ಪ್ರಕರಣಗಳು ಇತ್ಯರ್ಥ

ದಾವಣಗೆರೆ, ಡಿ.18- ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಶನಿವಾರ ಕಾನೂನು ಸೇವಾ ಪ್ರಾಧಿಕಾರದ ಆಶ್ರಯದಲ್ಲಿ ನಡೆದ ಬೃಹತ್ ಲೋಕ ಅದಾಲತ್‌ನಲ್ಲಿ ಒಟ್ಟು 5361 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, 7.97 ಕೋಟಿ ರೂ. ಪರಿಹಾರ ಕೊಡಿಸಲಾಗಿದೆ.

**7.97 ಕೋಟಿ ರೂ. ಪರಿಹಾರ**

ಒಟ್ಟು 11453 ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳಲ್ಲಿ 5361 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ರಾಜಿಯಾಗಬಲ್ಲ 312 ಅಪರಾಧ ಪ್ರಕರಣ ಗಳ ಪೈಕಿ 59 ಪ್ರಕರಣಗಳನ್ನು ಇತ್ಯರ್ಥಗೊಳಸಲಾಗಿದೆ.

ಒಪ್ಪಂದ ಉಲ್ಲಂಘನೆಗೆ ಸಂಬಂಧಿಸಿದಂತೆ ವಿಚಾರಣೆ ಕೈಗೆತ್ತಿಕೊಂಡ 1,012 ಪ್ರಕರಣಗಳ ಪೈಕಿ 140 ಪ್ರಕರಣಗಳನ್ನು ಇತ್ಯರ್ಥ ಪಡಿಸಿ 2.42 ಕೋಟಿ ರೂ. ಪರಿಹಾರ ಕೊಡಿಸಲಾಗಿದೆ.

ಬ್ಯಾಂಕ್‌ಗೆ ಸಂಬಂಧಿಸಿದ 128 ಪ್ರಕರಣಗಳ ಪೈಕಿ 21 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, 38.24 ಲಕ್ಷ ರೂ.ಪರಿಹಾರ ಕಲ್ಪಿಸಲಾಯಿತು.

ಹಣ ಮರುಪಾವತಿ ಪ್ರಕರಣಗಳಿಗೆ ಸಂಬಂಧಿಸಿದಂತೆ 109 ಪ್ರಕರಣಗಳ ಪೈಕಿ 10 ಪ್ರಕರಣಗಳು ಇತ್ಯರ್ಥವಾಗಿದ್ದು 20.53 ಲಕ್ಷ ರೂ., ಮೋಟರ್ ವಾಹನ ಕಾಯ್ದೆಯಡಿ ಬಂದಿದ್ದ ಒಟ್ಟು 415 ಪ್ರಕರಣಗಳ ಪೈಕಿ 46 ಪ್ರಕರಣಗಳನ್ನು ಬಗೆಹರಿಸಿ, 1.76 ಕೋಟಿ ರೂ. ಪರಿಹಾರ ಕೊಡಿಸಲಾಯಿತು.

ಕಾರ್ಮಿಕರಿಗೆ ಪರಿಹಾರ ಕೊಡಿಸುವ ಸಂಬಂಧ ಬಂದಿದ್ದ 9 ಪ್ರಕರಣಗಳ ಪೈಕಿ 1 ಪ್ರಕರಣ ಇತ್ಯರ್ಥವಾಗಿದ್ದು, 6.50 ಲಕ್ಷ ರೂ. (2ನೇ ಪುಟಕ್ಕೆ)





## ಹರಿಹರ ಗ್ರಾಮ ದೇವತೆ ಉತ್ಸವ

ಹರಿಹರ ನಗರದ ಮುಖ್ಯ ರಸ್ತೆಯ ಶ್ರೀ ಕಸಬಾ ಗ್ರಾಮ ದೇವತೆ ದೇವಿಯ ಕಾರ್ತಿಕ ಮಹೋತ್ಸವ ಶ್ರದ್ಧಾ ಭಕ್ತಿಯಿಂದ ಅದ್ಧೂರಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಅಧ್ಯಕ್ಷರು, ಸದಸ್ಯರು, ಅರ್ಚಕರು, ಸಿಬ್ಬಂದಿಗಳು ಹಾಗೂ ಅಪಾರ ಸಂಖ್ಯೆಯ ಭಕ್ತರು ಹಾಜರಿದ್ದರು.

## ಲಿಂಗೇಶ್ವರ ದೇವಸ್ಥಾನದಲ್ಲಿ ನಾಳೆ ಕಾರ್ತಿಕ

ದಾವಣಗೆರೆ, ಡಿ.18- ನಗರದ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿ.20 ರ ಸೋಮವಾರ ರಾತ್ರಿ 7.30 ಕ್ಕೆ ಕಾರ್ತಿಕ ನಡೆಯಲಿದೆ.

## ಪಾಪಮ್ಮನವರು ನಿಧನ



ಚಟ್ಟೋಬನಹಳ್ಳಿ, ಮೇಟೂರು ಕ್ಯಾಂಪ್ ವಾಸಿಯಾದ

**ಪಾಪಮ್ಮ** (88)

ಇವರು, ದಿ. :18.12.2021ರ ಶನಿವಾರ 11.45ಕ್ಕೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ.: 19.12.2021ರ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಂತ ಜಮೀನು (ಚಟ್ಟೋಬನಹಳ್ಳಿ, ಮೇಟೂರು ಕ್ಯಾಂಪ್) ಇಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗದವರು
94482 33142




# ಆವಾಸ್ ಯೋಜನೆಯಡಿ 1,156 ಮನೆಗಳು ಮಂಜೂರು



## ಗುಡಿಸಲು ಮುಕ್ತ ಪಟ್ಟಣಕ್ಕೆ ಆದ್ಯತೆ : ಹರಪನಹಳ್ಳಿ ಶಾಸಕ ಜಿ.ಕರುಣಾಕರ ರೆಡ್ಡಿ

ಹರಪನಹಳ್ಳಿ, ಡಿ.18- ಪಟ್ಟಣವನ್ನು ಗುಡಿಸಲು ಮುಕ್ತ ಮಾಡಿ ಪಕ್ಕಾ ಮನೆಗಳನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಸರ್ಕಾರ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ 1,156 ಮನೆಗಳು ಮಂಜೂರು ಆಗಿವೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಕುರುಬಗೇರಿಯಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಿರ್ಮಾಣವಾಗುತ್ತಿರುವ ಮನೆಗಳ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಯೋಜನೆಗಾಗಿ ಸರ್ಕಾರವು 7742.55 ಲಕ್ಷ ರೂ. ಮಂಜೂರಾಗಿದೆ. ಪ್ರತಿ ಮನೆಯ ನಿರ್ಮಾಣಕ್ಕೆ 6.59 ಲಕ್ಷ ರೂ. ವೆಚ್ಚವಾಗಲಿದ್ದು, ಎಸ್.ಟಿ ಮತ್ತು ಎಸ್.ಸಿ ಫಲಾನುಭವಿಗಳು ಹಾಗೂ ಹಿಂದುಳಿದ ವರ್ಗಗಳಿಗೆ ಮತ್ತು ಇತರೆ ವರ್ಗಗಳ ಫಲಾನುಭವಿಗಳು ಈ ಸೌಲಭ್ಯಗಳನ್ನು ಪಡೆಯಬಹುದು.

ಹಿಂದೆ 250 ಮನೆಗಳನ್ನು ಈ ಭಾಗದಲ್ಲಿ ನಿರ್ಮಾಣ ಮಾಡಲಾಗಿದೆ. ಇತರೆ ತಾಲ್ಲೂಕುಗಳಿಗೆ ಹೋಲಿಸಿದರೆ ನಮ್ಮ ತಾಲ್ಲೂಕಿನಲ್ಲಿ ಜಾಸ್ತಿ ಎಂದು ತಿಳಿಸಿದರು.

ಎಸ್.ಸಿ, ಎಸ್.ಟಿ ಗೆ 3.5 ಲಕ್ಷ ರೂ. ಸಹಾಯಧನ, ಸಾಮಾನ್ಯರಿಗೆ 2.70 ಲಕ್ಷ ರೂ. ಸಹಾಯಧನವಿದ್ದು, ಉಳಿದ 3.80 ಲಕ್ಷ ರೂ.ವನ್ನು ಫಲಾನುಭವಿಗಳು 4 ಕಂತಿನಲ್ಲಿ ಕಟ್ಟಬೇಕು. ಪಟ್ಟಣದಲ್ಲಿ ಸೂರು ಇಲ್ಲದವರಿಗೆ ಸೂರು ಹಾಗೂ ನಿವೇಶನ ಇಲ್ಲದವರಿಗೆ ನಿವೇಶನ ಹುಡುಕುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಅವರು ಎಂದರು.

ಈ ವೇಳೆ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತ್‌ಕರ್, ಸದಸ್ಯರುಗಳಾದ ಗೊಂಗಡಿ ನಾಗರಾಜ್, ಡಿ.ಅಬ್ದುಲ್‌ರೆಹಮಾನ್, ಲಾಟಿ ಮೆಹಬೂಬ್ ಸಾಬ್, ಕಿರಣ್ ಕುಮಾರ್, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ ಮೋರ್ಚಾದ ಕಾರ್ಯದರ್ಶಿ ಆರ್.ಲೋಕೇಶ್ ಇ.ಇ.ಆನಂದಪ್ಪ, ಕಾರ್ಯಪಾಲಕ ಅಭಿಯಂತರ ಬಿ. ಎಂ.ಕಂಪನಿಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ.ಕೃಷ್ಣ ರೆಡ್ಡಿ, ಸಹಾಯಕ ಇಂಜಿನಿಯರ್ ಎಸ್.ಜೆ.ಶಿವಕುಮಾರ್, ಮುಖಂಡರುಗಳಾದ ಎಂ.ಪಿ. ನಾಯಕ್, ಬೂದಿ ನವೀನ್, ಸಂತೋಷ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂಗನವಾಡಿ ಕಾರ್ಯಕರ್ತೆಯರಿಂದ ಬೆಳಗಾವಿಯಲ್ಲಿ ಪ್ರತಿಭಟನೆ



ದಾವಣಗೆರೆ, ಡಿ.18 - ಅಂಗನವಾಡಿ ಕಾರ್ಯಕರ್ತೆ ಯರು ಮತ್ತು ಸಹಾಯಕಿಯರು ತಮಗೆ ಕನಿಷ್ಠ ವೇತನ ಜಾರಿಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಬೆಳಗಾವಿ ಸುವರ್ಣ ಸೌಧದ ಬಳಿ ಎಐಟಿಯುಸಿ ಸಂಯೋಜಿತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ರಾಜ್ಯ ಸಮಿತಿ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಆರು ಸಾವಿರ ಅಂಗನವಾಡಿ ಕಾರ್ಯ ಕರ್ತೆಯರು ಮತ್ತು ಸಹಾಯ ಕಿಯರು ಭಾಗವಹಿಸಿದ್ದರು.

ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಆಗಮಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಚಿವ ಹಾಲಪ್ಪ ಆಚಾರ್ ಮನವಿ ಸ್ವೀಕರಿಸಿ ಸಕಾರಾತ್ಮಕವಾಗಿ ಸ್ಪಂದಿಸಿದರು.

ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ರಾಜ್ಯ ಅಧ್ಯಕ್ಷ ಕಾಂ. ಎನ್. ಶಿವಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಜಯ್ಯಮ್ಮ, ರಾಜ್ಯ ಖಜಾಂಚಿ ಕಾಂ.ಎಂ.ಬಿ. ಶಾರದಮ್ಮ, ರಾಜ್ಯ ಸಂಚಾಲಕ ಕಾಂ. ಆವರಗೆರೆ ಚಂದ್ರು, ಎಐಟಿಯುಸಿ ಬೆಳಗಾವಿ ಜಿಲ್ಲಾಧ್ಯಕ್ಷ ಕಾಂ. ನಾಗೇಶ್ ಸಾತೇರಿ ಸೇರಿದಂತೆ ಇತರರು ಧರಣಿ ನೇತೃತ್ವ ವಹಿಸಿದ್ದರು.

# ಪೌರ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸಲು ಸಮೀಕ್ಷೆ

**(1ನೇ ಪುಟದಿಂದ)** ಇವರಿಗೆ ತಕ್ಷಣದ ಪರಿಹಾರವಾಗಿ 40 ಸಾವಿರ ರೂ. ಒದಗಿಸಲಾಗಿದೆಯಾದರೂ, ಕೆಲವರಿಗೆ ತಲುಪಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಜೊತೆಗೆ, ವಸತಿ ಕಲ್ಪಿಸಲೂ ಸಹ ಕ್ರಮ ವಹಿಸಲಾಗುವುದು ಎಂದವರು ಹೇಳಿದರು.

ನಗರದಲ್ಲಿ ಪಾಲಿಕೆಯ ಪೌರ ಕಾರ್ಮಿಕರಿಗೆ 381 ಮನೆಗಳು ನಿರ್ಮಾಣವಾಗುತ್ತಿದ್ದು, ಜನವರಿ ಅಂತ್ಯದ ವೇಳೆಗೆ ಉದ್ಘಾಟನೆಗೆ ಸಿದ್ಧವಾಗಲಿವೆ. ಉಳಿದ ಪೌರ ಕಾರ್ಮಿಕರಿಗೆ ಆಶ್ರಯ ಮನೆಗಳನ್ನು ವಿತರಿಸುವಾಗ ಆದ್ಯತೆ ಮೇಲೆ ವಸತಿ ಕಲ್ಪಿಸುವಂತೆ ಪಾಲಿಕೆಯು ಪ್ರಸ್ತಾವನೆ ರೂಪಿಸಬೇಕು ಎಂದು ತಿಳಿಸುವುದಾಗಿ ಹೇಳಿದರು.

## ಪೌರ ಕಾರ್ಮಿಕರ ಮಕ್ಕಳಿಗೆ ಹಣ ಕೊಡಲು ಆಗಿಲ್ಲ : ಗೋಣೆಪ್ಪ

ಪಾಲಿಕೆಯ ವತಿಯಿಂದ ರೂಪಿಸಲಾದ ಕ್ರಿಯಾ ಯೋಜನೆಗೆ ಅಧಿಕಾರಿಗಳು ಅನುಮೋದನೆ ನೀಡಿಲ್ಲ.

ಹೀಗಾಗಿ ಪೌರ ಕಾರ್ಮಿಕರ ಮಕ್ಕಳ ಪುಸ್ತಕ ಹಾಗೂ ಆರೋಗ್ಯಕ್ಕಾಗಿ ಹತ್ತು ತಿಂಗಳಿಂದ ಒಂದು ರೂಪಾಯಿ ಹಣ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ ಎಂದು ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ ಗೋಣೆಪ್ಪ ಹೇಳಿದ್ದಾರೆ.

ಈ ಬಗ್ಗೆ ಉತ್ತರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ತಮ್ಮ ಬಳಿ ಕ್ರಿಯಾ ಯೋಜನೆಯ ಯಾವುದೇ ಕಡತ ಬಾಕಿ ಉಳಿದಿಲ್ಲ. ಈಗಾಗಲೇ ಒಪ್ಪಿಗೆ ನೀಡಲಾಗಿದೆ ಎಂದರು.

ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡಿ, ಸ್ಥಾಯಿ ಸಮಿತಿ ರೂಪಿಸಿದ ವರದಿಯಂತೆಯೇ ಅನುಮೋದನೆ ನೀಡಲಾಗಿದೆ. ಈ ಬಗ್ಗೆ ವಿವರಗಳನ್ನು ಒದಗಿಸಲಾಗುವುದು ಎಂದರು.

## ದಶಕದ ಆಡಳಿತದಲ್ಲಿ ತಂದೆ - ತಾತನ ವೈಫಲ್ಯ ಮುಂದುವರೆಸಿದ ಸರ್ವಾಧಿಕಾರಿ

# ಕೊರೊನಾ ಕಾಲದ ಕೊರಿಯಾದಲ್ಲಿ ಹಸಿವು, ದಮನ

ವಾಷಿಂಗ್ಟನ್, ಡಿ. 18 - ಉತ್ತರ ಕೊರಿಯಾದ ಸರ್ವಾಧಿಕಾರಿ ಆಡಳಿತಗಾರ ಕಿಮ್ ಜಾಂಗ್ ಉನ್ ಆಡಳಿತ ಹತ್ತು ವರ್ಷ ಪೂರೈಸಿದೆ. ಈ ಅವಧಿಯಲ್ಲಿ ದೇಶ ಅಪಾರ ಸಾವು - ನೋವುಗಳನ್ನು ಕಂಡಿದೆಯಾದರೂ, ಅವರ ತಂದೆ ಹಾಗೂ ತಾತನ ಕಾಲದ ಕರಾಳತೆಗೆ ತಲುಪಲು ಸಾಧ್ಯವಾಗಿಲ್ಲ ಎಂದು ವಿಶ್ಲೇಷಕರು ಹೇಳಿದ್ದಾರೆ.

ಕಿಮ್ ತಂದೆ ಎರಡನೇ ಕಿಮ್ ಜಾಂಗ್ ಹಾಗೂ ತಾತ ಕಿಮ್ ಸಂಗ್ ಅವರ ಆಡಳಿತ ಸಾಕಷ್ಟು ಕುಖ್ಯಾತವಾಗಿತ್ತು.

2011ರಲ್ಲಿ ಕಿಮ್ ಜಾಂಗ್ ಉನ್ ಆಡಳಿತ ಆರಂಭವಾಗಿತ್ತು. 2013ರಲ್ಲಿ ತಮ್ಮ ಚಿಕ್ಕಪ್ಪ ಹಾಗೂ 2017ರಲ್ಲಿ ತಮ್ಮ ಮಲ ಸಹೋದರನ ಹತ್ಯೆಗೆ ಅವರು ಆದೇಶಿಸಿದ್ದರು. ಇವರಲ್ಲದೇ ನೂರಾರು ಜನರು ಸರ್ವಾಧಿಕಾರಿ ಆಡಳಿತದಲ್ಲಿ ಹತ್ಯೆಗೀಡಾಗಿದ್ದಾರೆ.

ನೇರ ಹತ್ಯೆಗಳು ಕಡಿಮೆಯಾಗಿವೆಯಾದರೂ, ಈ ಕಮ್ಯುನಿಸ್ಟ್ ದೇಶದಲ್ಲಿ ಅನಾಹುತಗಳ ಪ್ರಮಾಣ ಕಡಿಮೆ ಇಲ್ಲ. ದೇಶ ಮೊದಲೇ ಏಕಾಂಗಿಯಾಗಿತ್ತು. ಕೊರೊನಾ ನಂತರ ಚೀನಾದ ಗಡಿಯನ್ನೂ ಮುಚ್ಚಲಾಗಿದೆ. ಇದರಿಂದಾಗಿ ಜನರು ದುರಾಡಳಿತದಿಂದ ತಪ್ಪಿಸಿಕೊಳ್ಳಲು ಯಾವುದೇ ದಾರಿ ಉಳಿಯದಂತಾಗಿದೆ.

ಆಹಾರ ಅಭದ್ರತೆಯಿಂದಾಗಿ ಮಕ್ಕಳು ಅಪೌಷ್ಠಿಕತೆಗೆ ಸಿಲುಕಿದ್ದಾರೆ. ಅತಿಸಾರ ಹಾಗೂ ನ್ಯುಮೋನಿಯಾದಿಂದ ಅಪಾರ ಸಾವುಗಳು ಸಂಭವಿಸಿದ್ದು, ಈ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಾಗುತ್ತಿಲ್ಲ.

ಮುಂದಿನ ಜನವರಿಗೆ 38 ವರ್ಷಕ್ಕೆ ಬರಲಿರುವ ಕಿಮ್ ಜಾಂಗ್ ಉನ್, ತಮ್ಮ ತಂದೆ ಹಾಗೂ ತಾತನ ಕಾಲದ ವಿನಾಶಗಳನ್ನು ಹಿಂದಿಕ್ಕುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹಲವಾರು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಕಳೆದ 70 ವರ್ಷಗಳಿಂದ ಉತ್ತರ ಕೊರಿಯಾ ಹಸಿವು ಹಾಗೂ ಹೆದರಿಕೆಯಲ್ಲೇ ಬಳಲುತ್ತಿದೆ. ಕಿಮ್ ಜಾಂಗ್ ಉನ್ ಆಡಳಿತದ ಮೊದಲ ದಶಕ ಹಿಂದಿನ ವಿಫಲ ನೀತಿಗಳನ್ನೇ ಮುಂದುವರೆಸಿದೆ.

1950ರಲ್ಲಿ ಕಿಮ್ ಜಾಂಗ್ ತಾತ ಕೊರಿಯಾ ಯುದ್ಧ ಆರಂಭಿಸಿದ್ದರು. ಈ ಯುದ್ಧದಲ್ಲಿ 40 ಲಕ್ಷ ಜನರು ಸಾವನ್ನಪ್ಪಿದ್ದರು. ಇವರಲ್ಲಿ ಬಹುತೇಕರು ಉತ್ತರ ಕೊರಿಯಾದವರಾಗಿದ್ದರು. ಆ ಸಂದರ್ಭದಲ್ಲಿ ವಿಶ್ವ ಸಂಸ್ಥೆಯು ದಕ್ಷಿಣ ಕೊರಿಯಾ ನೆರವಿಗೆ ಬಂದಿತ್ತು.

1953ರಲ್ಲಿ ದಕ್ಷಿಣ ಕೊರಿಯಾ ವಿರುದ್ಧದ ಬಲಪ್ರಯೋಗ ವಿಫಲವಾದ ನಂತರ ಕಿಮ್ ಸಂಗ್, ತಮ್ಮ ದೇಶವನ್ನು ಸೋವಿಯತ್ ಹಾಗೂ ಚೀನಾ ಪರವಾಗಿರುವಂತೆ ಮಾಡಿದ್ದರು. ಅವರ ಅವಧಿಯಲ್ಲಿ ಸಾವಿರಾರು ಅಧಿಕಾರಿಗಳನ್ನು ಹತ್ಯೆ ಮಾಡಲಾಗಿತ್ತು ಇಲ್ಲವೇ ದೇಶ ಬಿಟ್ಟು ಓಡಿಸಲಾಗಿತ್ತು.

ಅವರ ಪುತ್ರ ಎರಡನೇ ಕಿಮ್ ಜಾಂಗ್ ಜುಲೈ 1994ರಲ್ಲಿ ಅಧಿಕಾರಕ್ಕೆ ಬಂದಿದ್ದರು. ಆಗ ಭೀಕರ ಕ್ಷಾಮದಲ್ಲಿ 20 ಲಕ್ಷ ಜನ ಹಸಿವಿನಿಂದ ಸಾವಿಗೀಡಾಗಿದ್ದರು. ಹಸಿದ ಜನರಿಗೆ ಆಹಾರ ನೀಡುವ ಬದಲು ಕಿಮ್ ಜಾಂಗ್ ಬಹುತೇಕ ನೆರವಿನ ಹಣವನ್ನು ಸೈನ್ಯಕ್ಕೆ ಬಳಸಿದ್ದರು. 2011ರಲ್ಲಿ ಅವರು ಸಾವನ್ನಪ್ಪಿದ ನಂತರ ಕಿಮ್ ಜಾಂಗ್ ಉನ್ ಅಧಿಕಾರಕ್ಕೆ ಬಂದಿದ್ದರು.

ಒಂದೇ ಕುಟುಂಬದ ಮೂರನೇ ಪೀಳಿಗೆ ಅಧಿಕಾರಕ್ಕೆ ಬಂದರೂ, ದೇಶದ ಪರಿಸ್ಥಿತಿ ಬದಲಾಗಿಲ್ಲ. 2018 ಹಾಗೂ 2019ರಲ್ಲಿ ಉತ್ತರ ಕೊರಿಯಾದಲ್ಲಿ ಆಹಾರದ ಕೊರತೆ ದಾಖಲೆಯ 1.36 ದಶಲಕ್ಷ ಮೆಟ್ರಿಕ್ ಟನ್‌ನಷ್ಟಿದೆ. 2025ರವರೆಗೆ ಜನರು ಕಡಿಮೆ ಊಟ ಮಾಡಬೇಕೆಂದು ಕಿಮ್ ಜಾಂಗ್ ತಿಳಿಸಿದ್ದಾರೆ.

ಆರ್ಥಿಕ ಹಾಗೂ ಆಹಾರ ಸಮಸ್ಯೆ ಇದ್ದರೂ ಸಹ, ಕಿಮ್ ಜಾಂಗ್ ಸೈನ್ಯಕ್ಕಾಗಿ ಮಾಡುವ ವೆಚ್ಚದಲ್ಲಿ ಕಡಿಮೆಯಾಗಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಉತ್ತರ ಕೊರಿಯ 130 ಕ್ಷಿಪಣಿಗಳನ್ನು ಸಿಡಿಸಿದೆ. 2017ರಲ್ಲಿ ಮೂರು ಖಂಡಾಂತರಿ ಕ್ಷಿಪಣಿ ಸಿಡಿಸಲಾಗಿತ್ತು ಹಾಗೂ ಥರ್ಮೋ ನ್ಯೂಕ್ಲಿಯರ್ ಬಾಂಬ್ ಪರೀಕ್ಷೆ ನಡೆಸಲಾಗಿತ್ತು. ಇದು ಉತ್ತರ ಕೊರಿಯಾದಿಂದ ಜಗತ್ತಿನ ಇತರೆ ಭಾಗಗಳಿಗೆ ಅಪಾಯ ಎದುರಾಗುವಂತೆ ಮಾಡಿದೆ. ಉತ್ತರ ಕೊರಿಯಾದ ಸಂಕಷ್ಟ ಇತರೆ ದೇಶಗಳಿಗೂ ಹರಡುವ ಅಪಾಯ ಬಂದಿರುವುದೇ ಕಿಮ್ ಜಾಂಗ್ ಉನ್ ಅವಧಿಯಲ್ಲಿ ಆಗಿರುವ ಬದಲಾವಣೆ.

# ಕನ್ನಡ ಧ್ವಜಕ್ಕೆ ಅವಮಾನ ಕ್ರಮಕ್ಕೆ ಹೊನ್ನಾಳಿ ಕರವೇ ಆಗ್ರಹ



ಹೊನ್ನಾಳಿ,ಡಿ.18 - ಕೊಲ್ಲಾಪುರದಲ್ಲಿ ಕಿಡಿಗೇಡಿಗಳು ಕನ್ನಡ ಧ್ವಜವನ್ನು ಸುಟ್ಟು ಅಪಮಾನಗೊಳಿಸಿರುವ ಘಟನೆ ಖಂಡನೀಯ. ಈ ಕೃತ್ಯವೆಸಗಿರುವ ದುಷ್ಕರ ವಿರುದ್ದ ಕಾನೂನು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಉಪತಹಶೀಲ್ದಾರ್ ಸುರೇಶ್ ಅವರಿಗೆ ಮನವಿ ಸಲ್ಲಿಸಿದರು.

ವೇದಿಕೆಯ ಅಧ್ಯಕ್ಷ ಜೆ. ಮಂಜು ಮಾತನಾಡಿ, ಈ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಕನ್ನಡಪರ ಹೋರಾಟಗಾರರನ್ನು ಕೂಡಲೇ ಸರ್ಕಾರ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಮನೋಜ್‌ಕುಮಾರ್, ನವೀನ್, ಕತ್ತಿಗೆ ನಾಗರಾಜ್, ಯೋಗೀಶ್, ರಾಕೇಶ್, ಹಳದಪ್ಪ, ಮಾರಿಕೊಪ್ಪದ ಹಾಲೇಶಪ್ಪ, ಸತೀಶ್, ಅಮೀರ್ ಅಹಮ್ಮದ್ ಇದ್ದರು.

# ಫಾರ್ಮಸಿ ಪ್ರವೇಶಾತಿ ವಿಸ್ತರಣೆ

**(1ನೇ ಪುಟದಿಂದ)** ಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಫಾರ್ಮಸಿ ಮುಂತಾದ ಸೀಟುಗಳಿಗೆ ಮತ್ತೊಮ್ಮೆ 'ಕ್ಯಾಶುಯಲ್ ವೇಕೆನ್ಸಿ ರೌಂಡ್' ನಡೆಸಲು ತೀರ್ಮಾನಿಸಲಾಗಿದೆ ಎಂದು ಅವರು ವಿವರಿಸಿದರು.

ಹಿಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸೀಟುಗಳನ್ನು ಒಟ್ಟಿಗೇ ಹಂಚಲಾಗುತ್ತಿತ್ತು. ಆದರೆ, ಪ್ರಸಕ್ತ ಸಾಲಿನಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಆದಾಯ ಮಿತಿ ನಿರ್ಧಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದ್ದು, ಇದು ಇತ್ಯರ್ಥವಾಗುವವರೆಗೂ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶಾತಿ ಕೈಗೊಳ್ಳದಂತೆ ತಡೆಯಾಜ್ಞೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಎಐಸಿಟಿಇ) ಮತ್ತು ಭಾರತೀಯ ಮೆಡಿಕಲ್ ಕೌನ್ಸಿಲ್ ಜತೆ ಚರ್ಚಿಸಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸುಗಳಿಗೆ ಸಂಯೋಜಿತವಾಗಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು ಎಂದು ಅವರು ಹೇಳಿದರು.

# ರಾಯಣ್ಣ ಪ್ರತಿಮೆ ಭಗ್ನ

**(1ನೇ ಪುಟದಿಂದ)** ಕೈಗೊಳ್ಳಲು ಪೊಲೀಸರಿಗೆ ಸೂಚಿಸಿದ್ದೇವೆ. ತಪ್ಪಿತಸ್ಥರಿಗೆ ಈ ಬಾರಿ ಭಯ ಹುಟ್ಟಿಸುತ್ತೇವೆ. ಪೊಲೀಸರು ತೆಗೆದುಕೊಳ್ಳುವ ಕ್ರಮಗಳನ್ನು ಕಾದು ನೋಡಿ ಎಂದು ಸಚಿವರು ಹೇಳಿದ್ದಾರೆ.

# ಪುಂಡರ ವಿರುದ್ಧ ಕಠಿಣ ಕ್ರಮ

**(1ನೇ ಪುಟದಿಂದ)** ನಮ್ಮ ಕರ್ತವ್ಯ. ಅದಕ್ಕೆ ಮೊದಲು ಆದ್ಯತೆ ನೀಡುತ್ತೇವೆ. ಭಾಷಾ ಸಾಮರಸ್ಯಕ್ಕೆ ಕಿಡಿ ಹಚ್ಚುವುದು, ಕೋಮು ಸಾಮರಸ್ಯವನ್ನು ಹಾಳು ಮಾಡುವವರ ವಿರುದ್ಧ ದುಸ್ವಪ್ನವಾಗಿರುತ್ತೇವೆ ಎಂದರು.

ಬೆಳಗಾವಿಯಲ್ಲಿ ನಡೆದ ಪುಂಡಾಟ ಖಂಡನೀಯ. ಕಲ್ಲು ತೂರಾಟ ನಡೆಸಿದ ಕೆಲವು ಆರೋಪಿಗಳನ್ನು ಬಂಧಿಸಲಾಗಿದೆ. ಅಂತಹವರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ರಾಷ್ಟ್ರ ಭಕ್ತರ ಪ್ರತಿಮೆಗಳಿಗೆ ಅವಮಾನ ಮಾಡುವ ಪ್ರವೃತ್ತಿ ಸಹಿಸುವುದಿಲ್ಲ. ಅವರು ಎಲ್ಲಾ ಸಮುದಾಯಕ್ಕೆ ಸೇರಿದವರು. ದೇಶಕ್ಕಾಗಿ ಜೀವ ತ್ಯಾಗ ಮಾಡಿದವರು. ಅವರನ್ನು ಗೌರವಿಸಬೇಕು ಎಂದರು.

ಶಿವಸೇನೆಯ ಸಂಜಯ್ ರಾವತ್ ಅವರು ಮರಾಠಿಗಳು ಒಂದಾಗುವಂತೆ ಕರೆ ನೀಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಜವಾಬ್ದಾರಿ ಇರುವ ಜನರು ಯಾರನ್ನೂ ಯಾವ ಸಮಯದಲ್ಲಿಯೂ ಪ್ರಚೋದನೆ ಮಾಡಬಾರದು. ಯಾರಿಗೂ ಇಂತಹ ಕೆಲಸಗಳನ್ನು ಮಾಡಲು ಕುಮ್ಮಕ್ಕು ನೀಡಬಾರದು ಎಂದರು.

# ಮಲೇಬೆನ್ನೂರು ಪುರಸಭೆ ಚುನಾವಣೆ ಕಾಂಗ್ರೆಸ್‌ನ ಇಬ್ಬರು ಅವಿರೋಧ ಆಯ್ಕೆ



ಮಲೇಬೆನ್ನೂರು, ಡಿ.18- ಇಲ್ಲಿನ ಪುರಸಭೆ ಚುನಾವಣೆಗೆ ಸ್ಪರ್ಧಿಸಿದ್ದ 67 ಅಭ್ಯರ್ಥಿಗಳ ಪೈಕಿ 9 ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದು, ಅಂತಮವಾಗಿ ಚುನಾವಣಾ ಕಣದಲ್ಲಿ 59 ಅಭ್ಯರ್ಥಿಗಳು ಉಳಿದುಕೊಂಡಿದ್ದಾರೆ.

ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾದ ಶನಿವಾರ 9ನೇ ವಾರ್ಡ್‌ನಲ್ಲಿ (ಎಸ್ಸಿ ಮೀಸಲು) ಜೆಡಿಎಸ್ ಅಭ್ಯರ್ಥಿ ಅಂಜಿನಪ್ಪ ತಮ್ಮ ನಾಮಪತ್ರ ವಾಪಸ್ ಪಡೆದಿದ್ದರಿಂದ ಕಾಂಗ್ರೆಸ್ ಪಕ್ಷದ ಭೋವಿ ಶಿವು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅದೇ ರೀತಿ 15ನೇ ವಾರ್ಡ್‌ನಲ್ಲಿ (ಬಿಸಿಎಂ 'ಎ' ಮಹಿಳೆ ಮೀಸಲು) ಜೆಡಿಎಸ್ ಅಭ್ಯರ್ಥಿ ನಸ್ರೀನ್ ಬಾನು ಅವರು ತಮ್ಮ ನಾಮಪತ್ರ ವಾಪಸ್ ಪಡೆದಿದ್ದರಿಂದ ಕಾಂಗ್ರೆಸ್ ಪಕ್ಷದ ನಗೀನಬಾನು ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 23 ವಾರ್ಡ್‌ಗಳ ಪೈಕಿ 9 ಮತ್ತು 15ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 21 ವಾರ್ಡ್‌ಗಳಿಗೆ ಡಿ.27 ಕ್ಕೆ ಚುನಾವಣೆ ನಡೆಯಲಿದೆ.

ವಾರ್ಡ್ ನಂ. 8 ರಲ್ಲಿ (ಬಿಸಿಎಂ 'ಎ' ಮಹಿಳೆ ಮೀಸಲು) ಕಾಂಗ್ರೆಸ್ ಅಭ್ಯರ್ಥಿ ಶಾರದಮ್ಮ ಪೂಜಾರ್ ದೇವರಾಜ್ ಅವರು ತಮ್ಮ ನಾಮಪತ್ರ ವಾಪಸ್ ಪಡೆದಿದ್ದರಿಂದ ಇಲ್ಲಿ ಬಿಜೆಪಿ ಅಭ್ಯರ್ಥಿ ಸುಧಾ ಪಿ.ಆರ್. ರಾಜು ಮತ್ತು ಜೆಡಿಎಸ್ ಅಭ್ಯರ್ಥಿ ಗೌರಮ್ಮ ನಾಗರಾಜ್ ಅವರ ನಡುವೆ ನೇರ ಸ್ಪರ್ಧೆ ಏರ್ಪಡಲಿದೆ.

ವಾರ್ಡ್ ನಂ. 11 ರಲ್ಲಿ (ಸಾಮಾನ್ಯ) ಪಕ್ಷೇತರ ಅಭ್ಯರ್ಥಿ ಹುಲಿಗೇಶ್ ನಾಮಪತ್ರ ಹಿಂಪಡೆದಿದ್ದು, ಇಲ್ಲಿ ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವೆ ಚುನಾವಣೆ ನಡೆಯಲಿದೆ.

ವಾರ್ಡ್ ನಂ. 19, 20 ಮತ್ತು 22 ರಲ್ಲಿ ಪಕ್ಷೇತರ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ. ವಾರ್ಡ್ ನಂ. 1, 2, 6, 11, 13, 16, 17, 18, 19, 22, 23 ರಲ್ಲಿ ತ್ರಿಕೋನ ಸ್ಪರ್ಧೆ ಆಗಲಿದ್ದು, ವಾರ್ಡ್ ನಂ. 3, 4, 5, 7, 8, 10, 12, 14, 20 ಮತ್ತು 21 ರಲ್ಲಿ ನೇರ ಸ್ಪರ್ಧೆ ಏರ್ಪಡಲಿದೆ.

ವಾರ್ಡ್ ನಂ. 4, 5, 7 ಮತ್ತು 22 ರಲ್ಲಿ ಅವಿರೋಧ ಆಯ್ಕೆ ಮಾಡಬೇಕೆಂಬ ಪ್ರಯತ್ನ ಕೊನೆಯ ಕ್ಷಣದವರೆಗೂ ನಡೆದು ವಿಫಲವಾಯಿತು ಎನ್ನಲಾಗಿದೆ.

20 ವಾರ್ಡ್‌ಗಳಲ್ಲಿ ಕಾಂಗ್ರೆಸ್, 18 ವಾರ್ಡ್‌ಗಳಲ್ಲಿ ಜೆಡಿಎಸ್ ಮತ್ತು 14 ವಾರ್ಡ್‌ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಹಾಗೂ ವಾರ್ಡ್ ನಂ. 13 ರಲ್ಲಿ ಎಸ್‌ಡಿಪಿಐ ಅಭ್ಯರ್ಥಿ ದಾದಾವಲಿ, ಪಕ್ಷೇತರ ಅಭ್ಯರ್ಥಿ ಶಬ್ಬೀರ್ ಖಾನ್, ವಾರ್ಡ್ ನಂ. 3 ರಲ್ಲಿ ಪಕ್ಷೇತರ ಅಭ್ಯರ್ಥಿ ಕೆ.ಜಿ. ಮಂಜುನಾಥ್, ವಾರ್ಡ್ ನಂ. 5 ರಲ್ಲಿ ಪಕ್ಷೇತರ ಅಭ್ಯರ್ಥಿ ಅನ್ವರ್‌ಬಾನು ಮತ್ತು ವಾರ್ಡ್ ನಂ. 23 ರಲ್ಲಿ ಪಕ್ಷೇತರ ಅಭ್ಯರ್ಥಿ ಪಾಳೇಗಾರ್ ನಾಗರಾಜ್ ಅವರು ಚುನಾವಣಾ ಕಣದಲ್ಲಿದ್ದಾರೆ.

# ನಗರ ಉಪ ವಿಭಾಗದ ದಲಿತ ಮುಖಂಡರ ಸಭೆ



ದಾವಣಗೆರೆ, ಡಿ.18- ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿನ ನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರವರ ಕಚೇರಿಯಲ್ಲಿ ಇಂದು ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ನಗರ ಉಪ ವಿಭಾಗದ ದಲಿತ ಸಭೆಯನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಸಿಪಿಐ ಗುರುಬಸವರಾಜ್, ಬಡಾವಣೆ ಪೊಲೀಸ್ ಠಾಣೆ ಪಿಎಸ್ ಐ ಸುರೇಶ್ ಸಗರಿ, ಆಜಾದ್ ನಗರ ಠಾಣೆ ಪಿಎಸ್ ಐ ಗಜೇಂದ್ರಪ್ಪ, ಬಸವನಗರ ಠಾಣೆ ಪಿಎಸ್ ಐ ನಾಗಪ್ಪ ಬೊಂಕಾಳಿ ಸೇರಿ ದಂತೆ ದಲಿತ ಮುಖಂಡರು ಇದ್ದರು.

# ಹರಿಹರ : ವಿದ್ಯಾರ್ಥಿಗಳಿಂದ ಹರ ಮಾಲಾಧಾರಣೆ



ಹರಿಹರ,ಡಿ.18- ದಾವಣಗೆರೆ ಮೆಡಿಕಲ್ ಕಾಲೇಜ್ ಮತ್ತು ಹರಿಹರ ತಪೋವನದ ಆಯುರ್ವೇದಿಕ್ ಹಾಗೂ ಯೋಗ ಮತ್ತು ನಿಸರ್ಗ ಚಿಕಿತ್ಸಾ ಕಾಲೇಜಿನಲ್ಲಿ ಮೆಡಿಕಲ್ ಓದುತ್ತಿರುವ ಹಲವು ವಿದ್ಯಾರ್ಥಿಗಳು ಇಂದು ಹರ ಪೀಠಕ್ಕೆ ಭೇಟಿ ನೀಡಿ, ಪಂಚಮ ಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಇದೇ ಸಂದರ್ಭದಲ್ಲಿ ಹರ ಮಾಲೆ ಧಾರಣೆ ಮಾಡಿ ಹರ ಸಂಕಲ್ಪ ಮಾಡಿದರು. ಅವರಿಗೆ ಹರ ಮಾಲೆಯ ವಿಧಿವಿಧಾನಗಳನ್ನು ಬೋಧಿಸಲಾಯಿತು. ವಿಶೇಷವೆಂದರೆ ಈ ಮೆಡಿಕಲ್ ವಿದ್ಯಾರ್ಥಿಗಳಲ್ಲಿ ಗುಜರಾತ್, ಆಂಧ್ರ, ತಮಿಳುನಾಡು, ಉತ್ತರ ಪ್ರದೇಶದಿಂದ ಬಂದ ವಿದ್ಯಾರ್ಥಿಗಳಿದ್ದರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 16.12.2021ರ
ಗುರುವಾರ ನಿಧನರಾದ
ಶ್ರೀ ಗುರು ಸಿದ್ದೇಶ್ವರ ಸ್ವಾಮಿ ಗದ್ದುಗೆ ಸೇವಾ ಸಮಿತಿ ಹಾಗೂ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ ಸದಸ್ಯರಾದ

**ಬಸಾಪುರದ ಗೌಡ್ರ ಕರಿಬಸಯ್ಯ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಟ್ರಸ್ಟಿಗಳು, ಅಧ್ಯಕ್ಷರು ಮತ್ತು ಸದಸ್ಯರು**
**ಮಹೇಶ್ವರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್, ಬಸಾಪುರ.**
**ಶ್ರೀ ಗುರುಸಿದ್ದೇಶ್ವರ ಸ್ವಾಮಿ ಗದ್ದುಗೆ, ಸೇವಾ ಸಮಿತಿ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಗದ್ದುಗೆ ಸೇವಾ ಸಮಿತಿ, ಬಸಾಪುರ, ದಾವಣಗೆರೆ.**



॥ ಶ್ರೀ ಕೊಟ್ಟೂರು ಬಸವೇಶ್ವರ ಪ್ರಸನ್ನ ॥ ॥ ಶ್ರೀ ಮಸಿಯಾಂಬಿಕದೇವಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ, ಚನ್ನಗಿರಿ ತಾ,
**ಸೋಮಲಾಪುರ ಗ್ರಾಮದ ವಾಸಿ ಶ್ರೀಮತಿ ಶ್ರೀ ಯು.ಎ. ಸಿದ್ದಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 07.12.2021ನೇ ಮಂಗಳವಾರ ರಾತ್ರಿ 7.40ಕ್ಕೆ ನಮ್ಮ ತಂದೆಯವರಾದ
**ಶ್ರೀ ಯು. ಅಜ್ಜಪ್ಪನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 19.12.2021ನೇ ಭಾನುವಾರ ಬೆಳಗ್ಗೆ 10.30ಕ್ಕೆ ಸೋಮಲಾಪುರ ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.**

ಇಂತಿ ದುಃಖತಪ್ತರು:
**ಶ್ರೀಮತಿ ಶ್ರೀ ಸಿದ್ದಪ್ಪ ಯು.ಎ, ಶ್ರೀಮತಿ ಶ್ರೀ ನಾಗಪ್ಪ ಯು.ಎ ಶ್ರೀಮತಿ ಶಾಂತಮ್ಮ ರುದ್ರಪ್ಪ ಯು.ಎ. ಶ್ರೀಮತಿ ಗಂಗಮ್ಮ ರಾಮಚಂದ್ರಪ್ಪ, ಶ್ರೀಮತಿ ಮಂಜಮ್ಮ ಗುಡ್ಡಪ್ಪ, ಶ್ರೀಮತಿ ಸಿ. ಮಸಿಯಮ್ಮ ಮಲ್ಲಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸೋಮಲಾಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**


# 5361 ಪ್ರಕರಣಗಳು ಇತ್ಯರ್ಥ

**(1ನೇ ಪುಟದಿಂದ)** ಪರಿಹಾರ ಕೊಡಿಸಲಾಗಿದೆ. ವಿದ್ಯುತ್‌ಗೆ ಸಂಬಂಧಪಟ್ಟಂತೆ 196 ಪ್ರಕರಣ ಕೈಗೆತ್ತಿಕೊಂಡಿದ್ದು, 193 ಪ್ರಕರಣಗಳನ್ನು ಇತ್ಯರ್ಥಪಡಿಸಿ 8.96 ಲಕ್ಷ ರೂ. ಪರಿಹಾರ ಕೊಡಿಸಲಾಯಿತು.

ನಿರ್ದಿಷ್ಟ ಕಾರ್ಯಕ್ಷಮತೆ ಪ್ರಕರಣಗಳಿಗೆ ಸಂಬಂಧಿಸಿದ 8 ಪ್ರಕರಣಗಳು ಇತ್ಯರ್ಥಗೊಂಡು 19.75 ಲಕ್ಷ ಪರಿಹಾರ ನೀಡಲಾಯಿತು. 3693 ಪೆಟ್ಟಿ ಕೇಸ್‌ಗಳು ರಾಜೀಯಲ್ಲಿ ಮುಗಿದಿದ್ದು, 7.97 ಲಕ್ಷ ರೂ. ಹಾಗೂ 22 ಇತರೆ ಅಪರಾಧ ಪ್ರಕರಣಗಳ ಸಂಬಂಧ 2.72 ಲಕ್ಷ ರೂ. ಪರಿಹಾರ ಕೊಡಿಸಲಾಯಿತು.

ನ್ಯಾಯಾಲಯದಲ್ಲಿ ದಾವೆ ಹೂಡುವ ಪೂರ್ವದಲ್ಲಿ ಸಲ್ಲಿಸಲ್ಪಟ್ಟ ಮನವಿಗಳ 171 ಪ್ರಕರಣಗಳಿಗೆ ಸಂಬಂಧಪಟ್ಟಂತೆ 43 ಪ್ರಕರಣಗಳನ್ನು ಇತ್ಯರ್ಥಪಡಿಸಿ, 90.16 ಲಕ್ಷ ರೂ. ಪರಿಹಾರ ಕೊಡಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರ ನೇತೃತ್ವದಲ್ಲಿ ನಡೆದ ಅದಾಲತ್‌ನಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಸೇರಿದಂತೆ ಇತರೆ ನ್ಯಾಯಾಧೀಶರು ಉಪಸ್ಥಿತರಿದ್ದರು.

# ಡಿ.ಆರ್.ಡಿ.ಒ. ವಿಜ್ಞಾನಿ ಬಂಧನ

**(1ನೇ ಪುಟದಿಂದ)** ಮಾರುಕಟ್ಟೆಯಲ್ಲಿ ಸುಲಭವಾಗಿ ಲಭ್ಯವಿರುವ ವಸ್ತುಗಳನ್ನೇ ಬಳಸಿಕೊಂಡು ಸ್ಫೋಟಕ ತಯಾರಿಸಲಾಗಿತ್ತು. ಆದರೆ, ಸ್ಫೋಟಕವನ್ನು ಸರಿಯಾಗಿ ಹೊಂದಿಸಿರಲಿಲ್ಲ. ಹೀಗಾಗಿ ಡಿಟೋನೇಟರ್ ಮಾತ್ರ ಸ್ಫೋಟಗೊಂಡಿತ್ತು ಎಂದು ಪೊಲೀಸರು ಹೇಳಿದ್ದಾರೆ.

# ರೈತರಿಗೆ ಸೂಕ್ತ ಪರಿಹಾರಕ್ಕೆ ನಿರ್ಧಾರ



**(1ನೇ ಪುಟದಿಂದ)** ಹಾಕುತ್ತಿದ್ದಾರೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ರಿನ್ಯು ಕಂಪನಿ ತಾಲ್ಲೂಕಿನ ಹಿರೇಮಲ್ಲನಹೊಳೆ ವಿದ್ಯುತ್ ಪ್ರಸರಣ ಕೇಂದ್ರದಿಂದ ಮಠದ ದ್ಯಾಮವ್ವನಹಳ್ಳಿ ವಿದ್ಯುತ್ ಪ್ರಸರಣ ಕೇಂದ್ರದವರಿಗೆ ಹೈ ಪವರ್ ಟವರ್ ಹಾಗು ತಂತಿ ಅಳವಡಿಕೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಈ ಮಾರ್ಗದಲ್ಲಿ ದೊಣ್ಣೆಹಳ್ಳಿ, ಹೊಸಹಟ್ಟಿ, ಕಾಮಗೇತನಹಳ್ಳಿ, ಹೊನ್ನಮರಡಿ, ಜಮ್ಮಾಪುರ, ನಿಬಗೂರು, ಬಿದರಿಕೆರೆ ಸೇರಿದಂತೆ ವಿವಿಧ ಗ್ರಾಮಗಳ ರೈತರ ಜಮೀನುಗಳ ಮೇಲೆ ಕಾಮಗಾರಿ ನಡೆಯಲಿದೆ. ಆದರೆ ಜಮೀನಿನ ರೈತರು ಈಗಾಗಲೇ ಹಲವು ಬೆಳೆಗಳನ್ನು ಅಳವಡಿಸಿಕೊಂಡಿದ್ದು, ರೈತರಿಗೆ ಸರ್ಕಾರ ಹಾಗು ಖಾಸಗೀ ಕಂಪನಿ ಒಡಂಬಡಿಕೆಯಂತೆ ನಷ್ಟ ಪರಿಹಾರ ನೀಡುವಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಆರೋಪಿಸಿ, ಕಾಮಗಾರಿ ನಿಲ್ಲಿಸಲಾಗಿತ್ತು. ಇಂದು ನಡೆದ ಸಭೆಯಲ್ಲಿ ರೈತರು ನೇರವಾಗಿ ಜಿಲ್ಲಾಡಳಿತ ಹಾಗೂ ಶಾಸಕರೊಂದಿಗೆ ಸಂವಾದ ನಡೆಸಿ ಪರಿಹಾರದ ಬಗ್ಗೆ ಚರ್ಚಿಸಿದರು.

ಸಭೆಯಲ್ಲಿ ಎಸ್ಪಿ ರಿಷ್ಯಂತ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶಿಲ್ದಾರ್ ಶ್ರೀ ಧರ್, ಇಓ ಲಕ್ಷ್ಮಿಪತಿ, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ರೈತ ಸಂಘದ ಮುಖಂಡರು ಭಾಗವಹಿಸಿದ್ದರು.

# ವಾರ ಭವಿಷ್ಯ

**ದಿನಾಂಕ : 19.12.2021 ರಿಂದ 25.12.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ರಂಗಭೂಮಿ ಹಾಗು ಸಿನಿಮಾ ಕಲಾವಿದರಿಗೆ ಅತ್ಯುತ್ತಮ ಸಂಭಾವನೆಯ ಹಲವು ಅವಕಾಶಗಳು ತಾವಾಗಿಯೇ ಅರಸಿ ಬರಲಿವೆ, ಆದರೆ ಆಯ್ಕೆ ಉತ್ತಮವಾಗಿದ್ದರೆ ಲೇಸು. ವೈದ್ಯಕೀಯ ಕ್ಷೇತ್ರದಲ್ಲಿ, ಸಂಶೋಧನಾ ವಿಭಾಗಕ್ಕೆ ಸರ್ಕಾರದಿಂದ ಹೆಚ್ಚಿನ ಹೂಡಿಕೆಯಾಗಿ ವಿಜ್ಞಾನಿಗಳಿಗೆ ಇನ್ನೂ ಹೆಚ್ಚಿನ ಉತ್ಸಾಹ ಮೂಡಲಿದೆ. ಹಣಕಾಸಿನ ಸಮಸ್ಯೆ ಬಗೆಹರಿಯಲಿದೆ. ಆದಾಯದ ಮೂಲದಲ್ಲಿ ಹೆಚ್ಚಳ, ಹಲವು ಯತ್ನಗಳಿಂದ ಕಾರ್ಯ ಸಾಧ್ಯವಾಗಿ, ಉತ್ತಮ ಫಲಿತಾಂಶ ಸಿಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಅವಿವಾಹಿತರಿಗೆ ಕಂಕಣಭಾಗ್ಯ. ಹಳೇ ರೋಗಗಳು ಮತ್ತೆಮರುಕಳಿಸುವ ಸಂಭವವಿದ್ದು, ಮುನ್ನೆಚ್ಚರಿಕೆಯಿಂದಿರುವುದು ಉತ್ತಮ. ಸೋಮ -ಮಂಗಳ -ಬುಧ – ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಹೊಸ ಯೋಜನೆಯು ಆರ್ಥಿಕ ಕೊರತೆ, ಬಂಧು ಮಿತ್ರರಿಂದ ನೆರವು, ಅವರಿವರ ಮರುಳು ಮಾತನ್ನು ನಂಬಿ ಬಂಡವಾಳ ಹೂಡುವ ಹುಚ್ಚು ಸಾಹಸ ಮಾಡಬೇಡಿ. ಖಾಸಗಿ ಕಂಪನಿಯಲ್ಲಿರುವವರು, ಮೇಲಾಧಿಕಾರಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಿ. ಹಣಕಾಸಿನ ಹರಿವು ಸಾಧಾರಣವಾಗಿರುವುದರಿಂದ ಯಾವುದಕ್ಕೇ ಆಗಲಿ, ಮರುಹೊಂದಾಣಿಕೆ ಮಾಡಿಕೊಳ್ಳಲು ಹೋಗಬೇಡಿ. ಈ ವಿಷಯದಲ್ಲಿ ನಿಷ್ಠೂರವಾದರೂ ಚಿಂತೆಯಿಲ್ಲ. ವಯೋ ಸಹಜವಾದ ಹಿರಿಯರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಡಿ. ವಿದೇಶ ಪ್ರಯಾಣವನ್ನು ಸದ್ಯದಮಟ್ಟಿಗೆ ಮುಂದೂಡುವುದು ಉತ್ತಮ, ಗುರುಗಳನ್ನು ಆರಾಧಿಸಿರಿ. ಗುರು -ಶುಕ್ರ -ಶನಿ -ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ನಿಮ್ಮ ಮನಸ್ಸಿಗೆ ಎಷ್ಟೇ ಬೇಸರವಾಗಿದ್ದರೂ, ಕುಟುಂಬದ ಸದಸ್ಯರಲ್ಲಿ ತೋರ್ಪಡಿಸದೇ, ಅವರೊಂದಿಗೆ ಸ್ನೇಹ, ಸಹನೆಯಿಂದ ವರ್ತಿಸಿ, ಮಿತ್ರ ವರ್ಗದವರು ನಿಮ್ಮಿಂದ ಸಹಾಯ ಅರಸಿ ಬರಲಿದ್ದು, ನಿಮ್ಮ ಕೈಲಾದಷ್ಟು ನೆರವಾಗಿ. ಮಡದಿಯು ಕೊಡಲಿರುವ ಹಲವು ಸಲಹೆಗಳು ತಾತ್ಕಾಲಿಕ ನಿರುಪಯುಕ್ತವೆನಿಸಿದರೂ, ಕೆಲಕಾಲದ ನಂತರ, ನಿಮ್ಮ ಹಲವು ಸಮಸ್ಯೆಗಳಿಗೆ ಉತ್ತರ ಸಿಗಲಿದೆ. ಹೈನುಗಾರಿಕೆ ಸಾಕಷ್ಟು ಲಾಭದಾಯಕವಾದರೂ, ಅಷ್ಟೇ ಬಂಡವಾಳವನ್ನು ಬೇಡಲಿದೆ. ಹೂವು ಹಣ್ಣು, ತರಕಾರಿಗಳ ವಹಿವಾಟು ಜೋರಾಗಿಯೇ ನಡೆದರೂ ಲಾಭವಿಲ್ಲ. ಆಸ್ತಿ ಖರೀದಿ ವಿಚಾರ ಸದ್ಯಕ್ಕೆ ಬೇಡ. ಮಹಿಳೆಯರಿಗೆ ಉತ್ತಮ ದಿನ. ಭಾನು -ಬುಧ -ಗುರು -ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ನೀವು ಹೇಳಲಿರುವ ವಿಷಯವು ಎಷ್ಟೇಸಾರಿ ಹೇಳಿದರೂ ಕೆಲವರಿಗೆ ಅದು ತಿಳಿಯದೇ ನಿಮಗೆ ಮುಜುಗರವುಂಟಾಗಲಿದೆ. ಮನೆತನದಲ್ಲಿ ನೀವು ಹಿರಿಯರಾಗಿದ್ದಲ್ಲಿ ಕುಟುಂಬದಲ್ಲಿ ಯೋಗ್ಯರಾದವರಿಗೆ ಮಾತ್ರ ಸಲಹೆ, ಸೂಚನೆಗಳನ್ನು ಕೊಡಿ. ಕಟ್ಟುತ್ತಿರುವ ಹೊಸ ಮನೆಗೆ ಸಾಕಷ್ಟು ನೆರವು. ಕೆಲವು ವಿಷಯಗಳು ತಿಳಿದೂ ತಿಳಿಯದಂತಿರುವುದು ಮೇಲು. ಹುಚ್ಚು ಪ್ರೇಮದ ಹೊಳೆಯಲ್ಲಿ ಕೊಚ್ಚಿಹೋಗದೇ, ವಿವೇಚನೆಯಿಂದಿರುವುದು ಉತ್ತಮ. ಬೇರೆಯವರ ವಿವಾದಗಳನ್ನು ಬಗೆಹರಿಸುವ ಸಾಹಸ ಮಾಡಬೇಡಿ, ಅನಿವಾರ್ಯ ಪ್ರಸಂಗವಾಗಿದ್ದಲ್ಲಿ ಸಾಕಷ್ಟು ಎಚ್ಚರ ವಹಿಸಿರಿ. ಸೋಮ – ಬುಧ -ಶುಕ್ರ -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನಿಮ್ಮ ಕಷ್ಟ ನಷ್ಟ ಸಂಕಟಗಳ ನಡುವೆಯೂ ಸಮಾಜ ಸೇವೆ ಮಾಡಬೇಕೆಂಬ ಹಂಬಲವನ್ನು ಎಲ್ಲರೂ ಮೆಚ್ಚುವರು. ಅಧ್ಯಯನದ ವಿಷಯದಲ್ಲಿ ಗೊಂದಲವಿದ್ದ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ, ಬಂಧುಗಳಲ್ಲಿ ಸ್ನೇಹ ಸಂಬಂಧ ವೃದ್ಧಿಸಲಿದೆ. ಸರ್ಕಾರಿ ಕೆಲಸದ ನಿಮಿತ್ತ ಬೇರೆ ಕಡೆ ಪ್ರಯಾಣಿಸುವಾಗ ಸರ್ಕಾರಿ ದಾಖಲೆಗಳು ಕಳೆದುಹೋಗಬಹುದು ಸಾಕಷ್ಟು ಎಚ್ಚರದಿಂದಿರಿ, ಪಾಲುದಾರಿಕೆ ವ್ಯವಹಾರದಲ್ಲಿ ಸಂಯಮದಿಂದ ವರ್ತಿಸಿದಲ್ಲಿ ನಿಮ್ಮ ಮಾತಿಗೆ ಬೆಲೆ ಬರಲಿದೆ. ಸ್ವಪ್ರಯತ್ನದಿಂದ ಮುಂದುವರೆಯಿರಿ, ಕುಲದೇವತಾರಾಧನೆ, ಅನ್ನದಾನ ಮಾಡಿ, ನಿರೀಕ್ಷಿತ ಶುಭ ಸಮಾಚಾರಗಳನ್ನು ಕೇಳುವಿರಿ. ಭಾನು – ಮಂಗಳ -ಬುಧ -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅನಿರೀಕ್ಷಿತವಾಗಿ ದೂರದೂರಿಗೆ ಪ್ರಯಾಣ, ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ವಿಶೇಷ ಆಸಕ್ತಿ, ಪರರನ್ನು ಅವಲಂಬಿಸಿ ವ್ಯಾಪಾರಗಳನ್ನು ಮಾಡುವುದಕ್ಕಿಂತ, ಚಿಕ್ಕದಾದರೂ ಪರವಾಗಿಲ್ಲ ಸ್ವತಂತ್ರವಾಗಿ ಮಾಡುವುದು ಉತ್ತಮ. ಕೈಗಾರಿಕೋದ್ಯಮಿಗಳಿಗೆ, ಪಾಲುದಾರರೊಂದಿಗೆ ತೀವ್ರವಾದ ಭಿನ್ನಾಭಿಪ್ರಾಯಗಳು ಮೂಡಲಿವೆ. ಇದನ್ನು ಸೂಕ್ಷ್ಮವಾಗಿ ಪರಿಹರಿಸಿಕೊಳ್ಳಿ, ಏಕಕಾಲದಲ್ಲಿಯೇ ಹತ್ತು ಹಲವು ಕೆಲಸಗಳನ್ನು ಮಾಡಬೇಕಾದೀತು. ಹಣಕಾಸಿನ ಮೂಲದಲ್ಲಿ ಹೆಚ್ಚಳ ಸಾಧಾರಣವಾಗಿರುವುದರಿಂದ, ಖರ್ಚು ವೆಚ್ಚಗಳ ಮೇಲೆ ಕಡಿವಾಣ ಹಾಕುವುದು ಉತ್ತಮ. ಸಾಧು-ಸಂತರ ಭೇಟಿಯಾಗುವ ಸಂದರ್ಭ ಒದಗಿಬರಲಿದೆ. ಮಂಗಳ -ಬುಧ -ಶುಕ್ರ -ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಹೆಚ್ಚಿನ ಆದಾಯವಿದ್ದರೂ, ಅದಕ್ಕೆ ಸರಿಯಾಗಿ ಖರ್ಚು, ಸರಿದೂಗಿಸಿಕೊಂಡು ಹೋಗುವುದೊಂದೇ ದಾರಿ. ಸನ್ಮಾರ್ಗದಲ್ಲಿರುವ ಸಾಧು-ಸಂತರು, ಸಾಮಾಜಿಕವಾಗಿ ಬಹಳ ಕಿರುಕುಳ ಅನುಭವಿಸಬೇಕಾದೀತು. ಬರಬಹುದಾದ ಆಪಾದನೆಗಳಿಗೆ, ತಾಳ್ಮೆಯಿಂದ ಉತ್ತರಿಸಿ. ರಿಯಲ್ ಎಸ್ಟೇಟ್ ಮಧ್ಯವರ್ತಿಗಳಿಗೆ ಹೆಚ್ಚಿನ ಲಾಭ, ಎಷ್ಟೇ ಕೆಲಸಕಾರ್ಯಗಳ ಒತ್ತಡವಿದ್ದರೂ, ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಕೊಡಿ. ದಿನಸಿ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಿದರೂ, ಲಾಭಾಂಶ ಮಾತ್ರ ಸಾಧಾರಣ. ಹಿರಿಯರ ಆಸ್ತಿ ವಿಭಾಗದ ವಿಚಾರದಲ್ಲಿ ಹೆಚ್ಚಿನ ತಕರಾರು ಮಾಡದೆ, ಮಧ್ಯವರ್ತಿಗಳ ಮಾತಿನಂತೆ ನಡೆದುಕೊಳ್ಳಿ. ಪ್ರತಿದಿನ ವಿಷ್ಣು ಸಹಸ್ರನಾಮ ಪಠಿಸಿ. ಬುಧ -ಶುಕ್ರ -ಶನಿ -ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ವಾಸ್ತು ಶಾಸ್ತ್ರ ಅವಲಂಬಿಸಿ ಗೃಹ ನಿರ್ಮಾಣ ಮಾಡುವವರಿಗೆ ಅತಿ ಹೆಚ್ಚಿನ ಬೇಡಿಕೆ ಬರಲಿದೆ. ಬಾಳ ಸಂಗಾತಿಯ ಆಯ್ಕೆ ವಿಚಾರದಲ್ಲಿ ತಪ್ಪಾಗದಂತೆ ನೋಡಿಕೊಳ್ಳಿ. ಹೊಸ ವಾಹನ ಖರೀದಿ ಭರ್ಜರಿಯಾಗಿಯೇ ನಡೆಯಲಿದೆ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರಬೇಡ. ಹಿರಿಯರ ಆರೋಗ್ಯದಲ್ಲಿ ತೀವ್ರ ವ್ಯತ್ಯಾಸವಾಗುವ ಸಂಭವವಿದೆ. ಆದ್ದರಿಂದ ಪ್ರಯಾಣವನ್ನು ಸಾಧ್ಯವಾದಷ್ಟು ಮುಂದೂಡಿ, ನಿರುದ್ಯೋಗಿ ಪದವೀಧರರಿಗೆ ಸಾಧಾರಣ ವೇತನದ ನೌಕರಿ, ನಿಂತು ಹೋಗಿದ್ದ ಮದುವೆ ಪ್ರಸ್ತಾಪವು ಮತ್ತೆ ಮುನ್ನೆಲೆಗೆ ಬರಲಿದೆ.ಮಹಿಳೆಯರಿಗೆ ಸ್ತ್ರೀ ಸಂಬಂಧಿ ಅನಾರೋಗ್ಯ ಬಾಧಿಸಲಿದೆ. ಭಾನು -ಮಂಗಳ -ಗುರು -ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿಮ್ಮಲ್ಲಿ ಎಷ್ಟೇ ಉತ್ಸಾಹವಿದ್ದರೂ ಕೂಡ ಏಕ ಕಾಲದಲ್ಲಿಯೇ ಅನೇಕ ಕೆಲಸಗಳನ್ನು ಮಾಡುವ ಹುಚ್ಚು ಸಾಹಸಕ್ಕೆ ಕೈಹಾಕಬೇಡಿ. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮಪಟ್ಟಲ್ಲಿ ಮಾತ್ರ ಉತ್ತಮ ಫಲಿತಾಂಶ, ತಿಳಿಯದಿರುವುದನ್ನು ತಿಳಿದಿಲ್ಲ ಎಂದು ವಿನಮ್ರತೆಯಿಂದ ಹೇಳಿಕೊಳ್ಳುವುದರಲ್ಲೇ ನಿಮ್ಮ ಪ್ರಾಮಾಣಿಕತೆ ಅಡಗಿದೆ. ದೃಢ ನಿರ್ಧಾರದಿಂದ ಕೌಟುಂಬಿಕ ವಿಚಾರಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ. ವೈದ್ಯಕೀಯ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಆದಾಯದಲ್ಲಿ ಹೆಚ್ಚಳ, ಆಸ್ತಿವಿಭಾಗದ ವಿಷಯವನ್ನು ತಾತ್ಕಾಲಿಕವಾಗಿ ಮುಂದೂಡಿ. ಮಿತಿಮೀರುತ್ತಿರುವ ಖರ್ಚಿಗೊಂದು ಕಡಿವಾಣ ವಿರಲಿ.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಸಿದ್ಧಪಡಿಸಿದ ಉಡುಪು ಹಾಗು ಅಡುಗೆ ಪದಾರ್ಥಗಳ ತಯಾರಕರಿಗೆ ವಹಿವಾಟು ಹೆಚ್ಚಿ, ಉತ್ತಮ ಲಾಭ ಸಿಗಲಿದೆ. ಅವರಿವರ ಚಾಡಿಮಾತುಗಳಿಗೆ ಕಿವಿಗೊಡದೆ, ನಿಮ್ಮ ಪಾಡಿಗೆ ನೀವು ಸ್ಥಿತ ಪ್ರಜ್ಞನಂತೆ ಕೆಲಸ ಕಾರ್ಯಗಳನ್ನು ಮಾಡಿ, ಇದರಿಂದ ಮೇಲಾಧಿಕಾರಿಗಳ ಕೃಪೆಗೆ ಪಾತ್ರರಾಗುವಿರಿ. ರೈತಾಪಿ ಮಿತ್ರರಿಗೆ ಬೇಕಾದ ಪರಿಕರಗಳು ಸಕಾಲದಲ್ಲಿ ದೊರೆಯಲಿವೆ. ನ್ಯಾಯಾಲಯದ ಕೇಸುಗಳು ನಿಮ್ಮಂತೆ ಆದರೂ, ಮತ್ತೆ ಮುಂದೂಡಲ್ಪಡುವುದು. ಆಳವಾಗಿ ಯೋಚಿಸಿದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಅವಿವೇಕದ ಅರಿವಾಗಲಿದೆ. ಹಿರಿಯರ ಅನುಭವದ ಮಾತುಗಳು ಮತ್ತು ಸಲಹೆಗಳು ಕಾಲಾಂತರದಲ್ಲಿ ನಿಮಗೆ ಪ್ರಯೋಜನವಾಗಲಿವೆ. ಸೋಮ -ಬುಧ -ಶುಕ್ರ -ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಪ್ರಾಯಕ್ಕೆ ಬಂದ ಯುವಕರು ಮಾಡಲಿರುವ ಅಥವಾ ಮುಂದೆ ಮಾಡಬಹುದಾದ ಕೆಲಸಕಾರ್ಯಗಳ ಬಗ್ಗೆ ಆಲೋಚಿಸಿ, ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಲೇಸು. ರಾಜಕಾರಣಿಗಳು ತಾವು ಆಡಬಹುದಾದ ಮಾತುಗಳಲ್ಲಿ ಎಚ್ಚರಿಕೆ ಇರಲಿ, ಗೌರವಾನ್ವಿತ ವ್ಯಕ್ತಿಗಳಿಗೆ ಸರ್ಕಾರದಿಂದ ಸನ್ಮಾನವಾಗಲಿದೆ. ಮಹಿಳೆಯರಿಗೆ ಈ ಶುಕ್ರವಾರವು ಶುಭವನ್ನುಂಟು ಮಾಡಲಿದೆ. ಯಂತ್ರೋಪಕರಣಗಳ ಬಿಡಿಭಾಗಗಳ ಮಾರಾಟಗಾರರಿಗೆ ಹೆಚ್ಚಿನ ವ್ಯಾಪಾರ. ಹಿನ್ನಡೆಯನ್ನು ಅನುಭವಿಸುತ್ತಿದ್ದ ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ ಕಾಣುವಿರಿ, ಗೋ ಸೇವೆಯನ್ನು ಮಾಡಿ. ಭಾನು -ಗುರು -ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಅಲ್ಪರ ಸಂಗ ಅಭಿಮಾನ ಭಂಗ ಎಂಬಂತೆ ಇಂತವರ ಸಹವಾಸಬೇಡ, ನಿವೃತ್ತಿಯಂಚಿನಲ್ಲಿರುವವರು ತಮ್ಮ ಗಳಿಕೆ ಹಣದ ವಿಚಾರದಲ್ಲಿ ಮೋಸ, ಮತ್ತೊಬ್ಬರ ವಿಚಾರದಲ್ಲಿ ಪ್ರವೇಶ ಮಾಡುವುದರಿಂದ ಧನ-ಮಾನ ನಷ್ಟವಾಗಬಹುದು. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ, ಅಲಕ್ಷೆ ಮಾಡುವಂತಿಲ್ಲ. ಕೌಟುಂಬಿಕ ಸಮಸ್ಯೆಗಳು ಯಾವುದೇ ಆಗಿರಲಿ ಮುಕ್ತವಾಗಿ ಚರ್ಚಿಸಲು ಸದಸ್ಯರು ಕೊಡಬಹುದಾದ ಸಲಹೆಗಳಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯ. ಹಣಕಾಸಿನ ಹರಿವು ತಕ್ಕಮಟ್ಟಿಗೆ ಇರುವುದರಿಂದ ಖರ್ಚು-ವೆಚ್ಚಗಳ ಮೇಲೆ ಕಡಿವಾಣವಿರಲಿ, ಸಾಧು, ಸಂತರ ದರ್ಶನದಿಂದ ಪಾವನವಾಗುವಿರಿ. ಸೋಮ -ಮಂಗಳ -ಗುರು -ಶುಭ ದಿನಗಳು.

**ವಿಶೇಷ ದಿನಗಳು : ದಿ. : 19.12.2021 ನೇ ಭಾನುವಾರ, ಹುಣ್ಣಿಮೆ (ಹೊಸ್ತಿಲ ಹುಣ್ಣಿಮೆ) ದಿ. : 22.12.2021 ಬುಧವಾರ ಸಂಕಷ್ಟ ಚತುರ್ಥೀ, ಚಂದ್ರೋದಯ ರಾತ್ರಿ 8-46ಕ್ಕೆ.**

# 4 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

## ಭೂಮಿಪೂಜೆ ನೆರವೇರಿಸಿದ ರಾಣೇಬೆನ್ನೂರು ಶಾಸಕ ಅರುಣ್‌ಕುಮಾರ್ ಪೂಜಾರ್



ರಾಣೇಬೆನ್ನೂರು, ಡಿ.18- ನಮ್ಮ ಸರ್ಕಾರ ಕೋವಿಡ್, ಮಳೆ ಮುಂತಾದ ಸಂಕಷ್ಟದ ಪರಿಸ್ಥಿತಿಯಲ್ಲೂ ಸಹ ಹಿಂದೇಟು ಹಾಕದೇ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜನಪರ ಕೆಲಸಗಳಿಗೆ ಆದ್ಯತೆ ನೀಡುತ್ತಾರೆ ಎಂದು ಶಾಸಕ ಅರುಣಕುಮಾರ್ ಪೂಜಾರ್ ಹೇಳಿದರು.

ಶಾಸಕರು ತಾಲ್ಲೂಕಿನ ವಿವಿಧ ಗ್ರಾಮಗಳ ವ್ಯಾಪ್ತಿಯಲ್ಲಿ 2021 - 22 ನೇ ಸಾಲಿನ 5054 ಯೋಜನೆಯಡಿ 4 ಕೋಟಿಗೂ ಅಧಿಕ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿ ಅವರು ಮಾತನಾಡಿದರು.

ಐರಣಿಯಲ್ಲಿ 1 ಕೋಟಿ ರೂ., ಮೈದೂರು 25 ಲಕ್ಷ ರೂ., ಚಳಗೇರಿ 1 ಕೋಟಿ ರೂ., ಖಂಡೇರಾಯನಹಳ್ಳಿ 25 ಲಕ್ಷ ರೂ., ಹುಣಸಿಕಟ್ಟಿ 25 ಲಕ್ಷ ರೂ., ಚಿಕ್ಕಹರಳಹಳ್ಳಿ 60 ಲಕ್ಷ ರೂ., ಗಂಗಾಪುರ 50 ಲಕ್ಷ ರೂ., ಹುಲ್ಲತ್ತಿ 25 ಲಕ್ಷ ರೂ. ವೆಚ್ಚದಲ್ಲಿ ಗ್ರಾಮ ವ್ಯಾಪ್ತಿಯ ರಸ್ತೆ, ಚರಂಡಿ, ಸಿಡಿ ನಿರ್ಮಾಣ ಮುಂತಾದ ಗ್ರಾಮಸ್ಥರೇ ಆಯ್ಕೆ ಮಾಡಿ ಸೂಚಿಸಿದ ಕಾಮಗಾರಿಗಳಿಗೆ ಶಾಸಕರು ಹಸಿರು ನಿಶಾನೆ ತೋರಿಸಿದರು.

ತಮ್ಮ ಗ್ರಾಮಗಳಿಗೆ ಅವಶ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಜನರೇ ಆಯ್ಕೆ ಮಾಡಿಕೊಟ್ಟಿದ್ದು, ಅವರು ಹೇಳಿದ ಕೆಲಸಗಳಿಗೆ ಹಣ ನೀಡಿದ್ದೇನೆ. ಇನ್ನು ಅವಶ್ಯವಿರುವ ಕೆಲಸಗಳನ್ನು ಮುಂದಿನ ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕರು ವಿವರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಚೋಳಪ್ಪ ಕಸವಾಳ, ಪ್ರಕಾಶ್ ಪೂಜಾರ್, ರಮೇಶ್ ನಾಯ್ಕ, ಪವನ್ ಮಲ್ಲಾಡದ, ಭರಮಗೌಡ ಸಣ್ಣಗೌಡ್ರ, ರುದ್ರಪ್ಪ ಹರವಿ, ರುದ್ರೇಶ್, ನಿಂಗಪ್ಪ, ಎಲ್ಲಮ್ಮ ಮತ್ತಿತರರಿದ್ದರು.

# ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಚೆಕಾರ್ಡಿನಲ್ಲಿ ರಾಷ್ಟ್ರಭಕ್ತಿಯ ಅಭಿಯಾನ




ದಾವಣಗೆರೆ, ಡಿ. 18- ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಭಾರತೀಯ ಅಂಚೆ ಸೇವೆಯ ಚಿತ್ರದುರ್ಗ ವಿಭಾಗದಿಂದ ನಗರದ ಸಿದ್ಧಗಂಗಾ ಶಾಲೆಯಲ್ಲಿ ಅಂಚೆ ಕಾರ್ಡಿನಲ್ಲಿ ಮಕ್ಕಳು ತಮ್ಮ ಭಾವನೆಗಳನ್ನು ಅಕ್ಷರ ರೂಪದಲ್ಲಿ ಮೂಡಿಸಿದರು.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ತೆರೆಮರೆಗೆ ಸರಿದು ಹೋದ ಎಂದೂ ಹಾಡಿ, ಹೊಗಳಿಸಿಕೊಳ್ಳದ ನಾಯಕರುಗಳ ಬಗ್ಗೆ ಮತ್ತು 2047ರಲ್ಲಿ ಭಾರತ ಹೇಗಿರಬೇಕೆಂಬ ದೃಷ್ಟಿಕೋನದ ಚಿತ್ರಣವನ್ನು ಮಕ್ಕಳು ಅಂಚೆ ಕಾರ್ಡಿನಲ್ಲಿ ಬರೆದು ಭಾರತದ ಪ್ರಧಾನ ಮಂತ್ರಿಗಳ ವಿಳಾಸಕ್ಕೆ ಕಳಿಸಿದರು.

ಸ್ವಾತಂತ್ರ್ಯ ಆಚರಣೆಯ 75ನೇ ವರ್ಷದ ಸವಿನೆನಪಿಗಾಗಿ ಮಕ್ಕಳು 75 ಸಂಖ್ಯೆಯ ಆಕೃತಿ ಮೂಡಿಸಿ ಕಣ್ಮನ ಸೆಳೆದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಅಂಚೆ ವಿಭಾಗದ ಅಧೀಕ್ಷಕರಾದ ವಿರೂಪಾಕ್ಷಪ್ಪನವರು ಮಕ್ಕಳಿಗೆ ಸಂದರ್ಭದ ಮಹತ್ವ ಕುರಿತು ಮಾತನಾಡಿದರು.

ದಾವಣಗೆರೆ ಅಂಚೆ ಕಛೇರಿಯ ಈರಣ್ಣ, ಮುಖ್ಯ ಶಿಕ್ಷಕಿ ರೇಖಾ ರಾಣಿ ಉಪಸ್ಥಿತರಿದ್ದರು.

# ಹರಿಹರ : ಇಂದು 'ದಾರಿ ದೀಪ' ಕೃತಿ ಲೋಕಾರ್ಪಣೆ




ಹರಿಹರ, ಡಿ. 18 - ನಗರದ ಗುರುಭವನದಲ್ಲಿ ನಾಳೆ ದಿನಾಂಕ 19ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಚಿಂತನ ಪ್ರತಿಷ್ಠಾನ ಮತ್ತು ಪ್ರಗತಿಪರ ಬರಹಗಾರರ ಒಕ್ಕೂಟ ಇವರ ಸಹಯೋಗದೊಂದಿಗೆ ಸುಬ್ರಹ್ಮಣ್ಯ ನಾಡಿಗೇರ್ ಅವರು ಸಂಪಾದಿತ ಕೃತಿ ದಾರಿದೀಪ ಪುಸ್ತಕ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆಯ ಶ್ರೀ ಬಸವಪ್ರಭು ಸ್ವಾಮೀಜಿ ಲೋಕಾರ್ಪಣೆ ನೆರವೇರಿಸಲಿದ್ದಾರೆ. ಆರೋಗ್ಯಮಾತೆ ಚರ್ಚ್‌ನ ಧರ್ಮಗುರು ಡಾ.ಅಂತೋಣಿ ಪೀಟರ್ ಸಮಾರಂಭ ಉದ್ಘಾಟಿಸಲಿದ್ದಾರೆ.

ಪುಸ್ತಕ ಕುರಿತು ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷರಾದ ಸುಮತಿ ಜಯ್ಯಪ್ಪ ಮಾತನಾಡುವರು.

ಅಧ್ಯಕ್ಷತೆಯನ್ನು ರಾಮಕೃಷ್ಣಮೂರ್ತಿ ವಹಿಸಲಿದ್ದಾರೆ. ಬಿ.ವಾಮದೇವಪ್ಪ, ಹೆಚ್.ಎಸ್.ಶಿವಶಂಕರ್, ಡಾ.ಹೆಚ್.ಎಸ್.ಮಂಜುನಾಥ ಕುರ್ಕಿ, ರಾಜಶೇಖರ ಗುಂಡಗಟ್ಟಿ, ಬಿ.ಸಿ.ಸಿದ್ದಪ್ಪ, ಪ್ರೊ.ಹೆಚ್.ಎ.ಭಿಕ್ಷಾವರ್ತಿಮಠ, ರೇವಣಸಿದ್ದಪ್ಪ ಅಂಗಡಿ, ಡಾ.ಐ.ಎ.ಲೋಕಾಪುರ, ಬಿ.ರೇವಣಸಿದ್ದಪ್ಪ, ಸುಬ್ರಹ್ಮಣ್ಯ ನಾಡಿಗೇರ್, ಬಿ.ಎಸ್. ವಿದ್ಯಾರಣ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

# ಟೆಕ್ವಾಂಡೋ ಕ್ರೀಡಾಪಟುಗಳಿಗೆ ಸನ್ಮಾನ



**ಹರಿಹರ**

ಹರಿಹರ, ಡಿ.18 - ಕರ್ನಾಟಕ ಟೆಕ್ವಾಂಡೋ ಅಕಾಡೆಮಿ ಇವರ ಆಶ್ರಯದಲ್ಲಿ ಇತ್ತೀಚೆಗೆ ನೆರವೇರಿದ ಪ್ರಥಮ ಕೆ.ಟಿ.ಎ. ಟೆಗ್ ಟಿಮ್ ಕ್ಯೊರಂಗಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದ್ದ ಜಿಲ್ಲಾ ಟೆಕ್ವಾಂಡೋ ಸಂಸ್ಥೆಯ ಕ್ರೀಡಾಪಟುಗಳನ್ನು ಬಾತಿ ತಪೋವನ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಶಶಿಕುಮಾರ್ ಮೆಹರ್ವಾಡೆ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಟೆಕ್ವಾಂಡೋ ಸಂಸ್ಥೆಯ ಅಧ್ಯಕ್ಷ ಜಿ.ವಿ. ಪ್ರವೀಣ್ ಕುಮಾರ್, ಕಾರ್ಯದರ್ಶಿ ಎಸ್.ಪ್ರಭಾಕರ್, ತರಬೇತುದಾರುಗಳಾದ ದಿನೇಶ್, ಎನ್.ರಮೇಶ್ ಉಪಸ್ಥಿತರಿದ್ದರು.

# ಏಕರೂಪ ದರದಲ್ಲಿ ಕಬ್ಬು ಖರೀದಿಗೆ ಬೆಳೆಗಾರರ ಸಂಘದ ಒತ್ತಾಯ



**ಹೂವಿನ ಹಡಗಲಿ**

ಹೂವಿನಹಡಗಲಿ, ಡಿ.18- ಕಬ್ಬು ಬೆಳೆಗಾರರಿಗೆ ಅನ್ಯಾಯವಾಗದಂತೆ ಕಬ್ಬು ಬೆಳೆ ದರ ನಿಗದಿ ರಾಜ್ಯಾದ್ಯಂತ ಏಕರೂಪವಾಗಿರಬೇಕು ಎಂದು ತಾಲ್ಲೂಕು ಕಬ್ಬು ಬೆಳೆಗಾರರ ಸಂಘ ಒತ್ತಾಯಿಸಿದೆ.

ಕಬ್ಬು ಕಟಾವು ಸೀನಿಯಾರಿಟಿ ಪ್ರಕಾರ ನಡೆಯಬೇಕು, ಪ್ರಾಮಾಣಿಕ ರೈತರಿಗೆ ಅನ್ಯಾಯವಾಗದಂತೆ ತಡೆಯಬೇಕು. ಕಬ್ಬು ಕಟಾವು ಕೂಲಿ ಕಾರ್ಮಿಕರು ಮತ್ತು ಅವರ ಮಕ್ಕಳ ಯೋಗಕ್ಷೇಮಕ್ಕಾಗಿ ಪ್ರತೀ ಸಕ್ಕರೆ ಕಂಪನಿಗಳಲ್ಲಿ ಆರೋಗ್ಯ ಕೇಂದ್ರ ಸ್ಥಾಪಿಸಬೇಕು. ಉಚಿತ ಶಿಕ್ಷಣ ನೀಡಬೇಕು. ಅಲ್ಲದೇ, ಈ ವರ್ಷದ ಅತಿವೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು, ರೈತರಿಗೆ ಅನ್ಯಾಯವಾಗದಂತೆ ಅತಿ ಶೀಘ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸರ್ಕಾರಕ್ಕೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಎಚ್ಚರಿಕೆಯ ಮನವಿ ಸಲ್ಲಿಸುವುದಾಗಿ ಸಂಘದ ಅಧ್ಯಕ್ಷ ಬೆನ್ನೂರು ಹಾಲೇಶಪ್ಪ ತಿಳಿಸಿದ್ದಾರೆ.

# ಬೀದಿನಾಟಕ ಕಲಾತಂಡಗಳಿಂದ ಅರ್ಜಿ

ದಾವಣಗೆರೆ, ಡಿ.18- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಇಲಾಖೆಯಲ್ಲಿ ನೋಂದಣಿಯಾಗಿರುವ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಜಿಲ್ಲೆಗೆ ಒಟ್ಟು 05 ತಂಡಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಆಸಕ್ತ ಬೀದಿ ನಾಟಕ ಕಲಾತಂಡಗಳು ಇದೇ ದಿನಾಂಕ 21 ರೊಳಗೆ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

## ಪದವಾಣಿ-05

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

1) ಭೀಮ ದ್ರೌಪದಿಗಾಗಿ ತಂದ ಪುಷ್ಪ 4
3) ಕವಿತೆ ಬರೆಯುವವಳು 4
5) ವನದಲ್ಲಿ ಹೊಕ್ಕ ಮುಖ 3
6) ಭಾಗ ಹೀಗಾಗಿದೆ 2
7) ಕೈಯಿಂದ ಕಟ್ಟಿದ ತೆರಿಗೆ 2
11) ಕಳಸದ ಮೇಲಿರುವ ಧೂಳು 2
13) ವಿಷಯದಲ್ಲಿರುವ ನಂಜು 2
14) ದನ ಮೇಯಿಸಲು ಬಂದ ಮನ್ಮಥ 3
15) ಖಾಲಿ ಹಸ್ತ 4
16) ವಾರಕ್ಕೊಮ್ಮೆ ಬಂದ ಕಾವಲುಗಾರ

**ಮೇಲಿನಿಂದ ಕೆಳಕ್ಕೆ :**

1) ಕೊಲ್ಲೂರು ಈ ನದಿ ದಂಡೆ ಮೇಲಿದೆ 4
2) ಕಾಯುವವನು 3
3) ಹೇಗೆ ನೋಡಿದರೂ ಇದು ಬಂಗಾರ 3
4) ಮೂರು ಲೋಕ 4
6) ಬೆಳಕು ಹಾದು ಹೋಗುವಂತದ್ದು 5
8) ಸಂತೋಷ ಮರುಕ್ಷಣ 5
9) ಗೊಮ್ಮಟೇಶ್ವರ ನೆಲೆಸಿರುವ ಬೆಟ್ಟ 4
10) ಭದ್ರಾವತಿಯ ಪುರಾತನ ಹೆಸರು 4
12) ಸರಕ್ಕಾಗಿ ನಡೆದ ಯುದ್ಧ 3
13) ಈರ್ ಗರುಡನ ತಾಯಿ 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 04ರ ಉತ್ತರಗಳು :**

**ಎಡದಿಂದ ಬಲಕ್ಕೆ :** 1) ಸಂಕಲನ 3) ಹನುಮಂತ 5) ಕರಗತ 6) ರಹದಾರಿ 7) ಮಧುಮಾಸ 9) ವಸುಂಧರ 11) ರಿಯಾಯಿತಿ 12) ನಕ್ತಂಚರ.

**ಮೇಲಿನಿಂದ ಕೆಳಕ್ಕೆ :** 1) ಸಂಶೋಧಕ 2) ನವನೀತ 3) ಹರಿಹರ 4) ತರಕಾರಿ 7) ಮದಕರಿ 8) ಸತಿಪತಿ 9) ವರಮಾನ 10) ರವಿವಾರ.

# ಕೆಪಿಎಸ್‌ಸಿ ಯಿಂದ ಸ್ಪರ್ಧಾತ್ಮಕ ಪರೀಕ್ಷೆ

ದಾವಣಗೆರೆ, ಡಿ. 18- ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ತಾಂತ್ರಿಕೇತರ ಗ್ರೂಪ್ 'ಸಿ' ಪದವಿಪೂರ್ವ ವಿದ್ಯಾರ್ಹತೆಯುಳ್ಳ ಹುದ್ದೆಗಳ ನೇಮಕಾತಿಗಾಗಿ ನಾಳೆ ದಿನಾಂಕ 19ರ ಭಾನುವಾರ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಸದಾಶಿವ ಪ್ರಭು ತಿಳಿಸಿದ್ದಾರೆ.

ಅಪರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಪರೀಕ್ಷಾ ವೀಕ್ಷಕರು, ಮೇಲ್ವಿಚಾರಕರು ಪರೀಕ್ಷೆಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಅವರು ಮಾಹಿತಿ ನೀಡಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 17 ಕೇಂದ್ರಗಳಲ್ಲಿ ನಡೆಯಲಿದ್ದು, ಒಟ್ಟು 6843 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಸಭೆಯಲ್ಲಿ ಡಿಡಿಪಿಯು ಶಿವರಾಜು, ಡಿಡಿಪಿಐ ತಿಪ್ಪೇಶಪ್ಪ ಸೇರಿದಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಇದ್ದರು.



**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬೇಕಾಗಿದ್ದಾರೆ**
ELTHOR ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂನಲ್ಲಿ ಕೆಲಸ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ.
ವಿದ್ಯಾನಗರ ಕೊನೆ ಬಸ್ ನಿಲ್ದಾಣದ ಹತ್ತಿರ, ದಾವಣಗೆರೆ.
ಮೊ: 90367 14507

**ಹೊಸಮನೆ ಮಾರಾಟಕ್ಕಿದೆ**
ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಇಂಜಿನಿಯರ್ಸ್ ಅಂಡ್ ಡೆವಲಪರ್ಸ್ ನಿರ್ಮಿಸಿರುವ ಉತ್ತರ ದಿಕ್ಕಿನ 20×30 ಅಳತೆಯ ಹೊಸಮನೆ ಮಾರಾಟಕ್ಕಿದೆ. ವಾಸ್ತು ಪ್ರಕಾರ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕ ಇರುವ, ಫರ್ನಿಷ್ಡ್ ಎರಡು ಬೆಡ್ ರೂಮ್ ಮತ್ತು ಸ್ವಂತ ಬೋರ್ ವೆಲ್ ಹೊಂದಿರುವ ಮನೆ. ಸಂಪರ್ಕಿಸಿ
63601 09142

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ.
ವಯೋಮಿತಿ: 20 ರಿಂದ 30
86609 17780

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ: ಪಿಯುಸಿ, ವಯಸ್ಸು 18 ವರ್ಷ ಮೇಲ್ಪಟ್ಟು, ವೇತನ ರೂ.9,000-12,000 ವರೆಗೆ ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು. ದ್ವಿಚಕ್ರವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿಎಲ್-ಆರ್‌ಸಿ ಕಾರ್ಡ್ ಹೊಂದಿರಬೇಕು. ಎಸ್.ಕೆ.ಎಸ್. ಅಗ್ರಿಟೆಕ್ ಪ್ಲಾಂಟೇಷನ್ ಪ್ರೈ.ಲಿ. ಎಸ್‌ಎಸ್ ಹೈಟೆಕ್ ಆಸ್ಪತ್ರೆ ಮುಖ್ಯರಸ್ತೆ, ಲಕ್ಷ್ಮಿ ಬಡಾವಣೆ, ದಾವಣಗೆರೆ.
89514 55892, 99023 42040, 81500 67146

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಮತ್ತು 3 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
87622-21972

**ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ರೆಸ್ಟೋರೆಂಟ್‌ನಲ್ಲಿ ಕ್ಯಾಪ್ಟನ್ ಮತ್ತು ವೆಯ್ಟರ್ ಆಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ
99160 29414

**ಮನೆ ಲೀಸ್/ಬಾಡಿಗೆಗೆ**
ಲೋಕಿಕೆರೆ ಕೈಗಾರಿಕಾ ವಲಯ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಹತ್ತಿರವಿರುವ 2 BHK ಲಿಫ್ಟ್ ಕಾರ್ ಪಾರ್ಕಿಂಗ್, ನೀರಿನ ವ್ಯವಸ್ಥೆ, ಸುಸಜ್ಜಿತ 1 ಮನೆ ಲೀಸ್/ಬಾಡಿಗೆಗೆ ಇದೆ ವಿಚಾರಿಸಿ
99004 11110
99865 38099

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಹೊಸ ಮನೆ ಮಾರಾಟಕ್ಕಿದೆ**
ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ ಮಹಾಲಕ್ಷ್ಮಿ ಲೇ ಔಟ್, ಶಿವಗಂಗ ಕಲ್ಯಾಣ ಮಂಟಪ ಹತ್ತಿರ, ಕುಂದುವಾಡ ರಸ್ತೆ.
91643 02283
96204 31578

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪ ಹೊಲ ಮತ್ತು ಆಕಳು ನೋಡಿಕೊಳ್ಳಲು ಬೇಕಾಗಿದ್ದಾರೆ.
ಸಂಪರ್ಕಿಸಿ:
70185 88900
95388 70257

**REQUIRED**
Required Tele marketing Executives for reputed Bank
95354 55609

**ಸೈಟು ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 47×71 ಅಳತೆಯ ಸೈಟು ಮಾರಾಟಕ್ಕಿದೆ.
99866 17483
78996 81386

**ಮಳಿಗೆ ಬಾಡಿಗೆಗೆ ಇದೆ**
ಮುನ್ಸಿಪಲ್ ಸ್ಟೇಡಿಯಂ ಕಾಂಪ್ಲೆಕ್ಸ್ ಎದುರು, 2ನೇ ಮೇನ್ ಪಿ.ಜೆ. ಬಡಾವಣೆ, ದಾವಣಗೆರೆ.
97392 90066
97401 63063

**ಈಶ್ವರಿ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ & ಟೈಲರಿಂಗ್ ಕೋರ್ಸ್
ಸಮಯ: ಬೆಳಿಗ್ಗೆ 10 ರಿಂದ 3ರವರೆಗೆ
ಶ್ರೀ ಜಗದ್ಗುರು ರೇಣುಕ ಕೃಪಾ
# 2798 ಜಿ. ಕ್ರಾಸ್, 3ನೇ ಮೇನ್, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ದಾವಣಗೆರೆ
97316 50435
95358 15543

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ (ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್) ಪಶ್ಚಿಮ ದಿಕ್ಕಿನಲ್ಲಿರುವ ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ.
ಡೋರ್ ನಂ.790/6/176
ಸಂಪರ್ಕಿಸಿ: 94827 64316

**ಮನೆ ಬಾಡಿಗೆಗೆ**
ಸಿಂಗಲ್ ಬೆಡ್ ರೂಂ ಸುಸಜ್ಜಿತ ಮನೆ "ಸುಮಂತ್ ನಿಲಯ", 3ನೇ ಮೇನ್, 4ನೇ ಕ್ರಾಸ್, ವಿನೋಬನಗರ ಇಲ್ಲಿ ಬಾಡಿಗೆಗಿದೆ.
ಸಂಪರ್ಕಿಸಿ :
87623 92005

**ಬೇಕಾಗಿದ್ದಾರೆ**
ಪೇಂಟ್ ಕಂಪನಿಯಲ್ಲಿ ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿ.ಸೂ: ಕನಿಷ್ಠ ಒಂದು ವರ್ಷ ಅನುಭವ ಇರುವವರಿಗೆ ಆದ್ಯತೆ.
74119 13202

**ಸೈಟ್ ಮಾರಾಟಕ್ಕಿದೆ**
ಬಾಡಾ ಕ್ರಾಸ್ ಹತ್ತಿರ ಪೊಲೀಸ್ ಲೇಔಟ್‌ನಲ್ಲಿ 30x40 ಅಳತೆ ಸೈಟ್ ಮಾರಾಟಕ್ಕಿದೆ.
99454 32349
79758 23058

**ಬೇಕಾಗಿದ್ದಾರೆ**
ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸಲು PUC, BA/BSc B.Ed. ಆಗಿರುವ ಮೂವರು ಮಹಿಳಾ ವಾರ್ಡನ್‌ಗಳು ಹಾಗೂ BSc B.Ed. (PM) ಆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ
91106 79096

**ಮನೆ ಬಾಡಿಗೆಗೆ ಇದೆ**
DCM ಟೌನ್ ಶಿಪ್ A Block 1ನೇ ಮೇನ್, 2ನೇ ಕ್ರಾಸ್‌ನಲ್ಲಿ ಮೊದಲನೇ ಮಹಡಿಯಲ್ಲಿ 3 ಬೆಡ್‌ರೂಂ ಇರುವ ಹಾಗೂ ಬೋರ್ ನೀರು ಹಾಗೂ ಕಾರ್ಪೊರೇಷನ್, ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ.
88672 33324, 97416 82662

**ಸೈಟು ಮಾರಾಟಕ್ಕಿದೆ**
50x80 ಅಳತೆಯ ಸೈಟ್, ಜಯನಗರ ಲಿಂಕ್ ರಸ್ತೆಯ ಪಶ್ಚಿಮಕ್ಕೆ 45 ಅಡಿ ಮುಖ್ಯ ರಸ್ತೆ, ಹಿಂಬದಿಗೆ 30 ಅಡಿ ಸಿಸಿ ರಸ್ತೆ ಇದೆ. ನಿಟುವಳ್ಳಿ, ದಾವಣಗೆರೆ.
90607 90962
86608 09919

**3 ಬೆಡ್ ರೂಂ ಮನೆ ಬಾಡಿಗೆಗಿದೆ**
ರೆಡ್‌ಆಕ್ಸೈಡ್ ಫ್ಲೋರಿಂಗ್, ಬೋರ್‌ವೆಲ್/ಮುನ್ಸಿಪಲ್ ನೀರಿನ ಗ್ರೌಂಡ್ ಫ್ಲೋರ್ ಇರುವ ಮನೆ. ಎಂ.ಸಿ.ಸಿ. ಎ ಬ್ಲಾಕ್, 4ನೇ ಕ್ರಾಸ್, ವಿನಾಯಕ ಆಸ್ಪತ್ರೆ, ದಾವಣಗೆರೆ.
ಅಫಿಷಿಯಲ್‌ಗೆ ಮೊದಲ ಅವಕಾಶ.
98929 28277, 9833 209777

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಇಂಡಸ್ಟ್ರಿಯಲ್ ಏರಿಯಾ, ಪಿ.ಬಿ. ರಸ್ತೆ ಹಾಗೂ ದಾವಣಗೆರೆ ಸಿಟಿ. ಆಕರ್ಷಕ ವೇತನ, PF & ESI ಸೌಲಭ್ಯವಿದೆ.
63632 68681
73539 50027

**ಮನೆ ಬಾಡಿಗೆಗಿದೆ**
#5626/7 "ಜ್ಯೋತಿ ನಿಲಯ" SS ಬಡಾವಣೆ, 'ಬಿ'ಬ್ಲಾಕ್, ಡಬಲ್ ಬೆಡ್ ರೂಂ ವಾಸ್ತು ಪ್ರಕಾರವಿದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ, ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್.
73490 63919 ಜ್ಯೋತಿ ಎಂ.ಆರ್
93410 04279 ಸುರೇಶ್

**1 BHK ಮನೆ ಬಾಡಿಗೆಗಿವೆ**
2ನೇ ಮಹಡಿ, ನಂ. 1700, ಕೆಟಿಜೆ ನಗರ 18ನೇ ಕ್ರಾಸ್, ಕೆಇಬಿ ಬಲಮುರಿ ದೇವಸ್ಥಾನದ ಎದುರು, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ.
76765 50352
96322 69657
98447 07722

**ಬೇಕಾಗಿದ್ದಾರೆ**
ಸೇಲ್ಸ್ ಮನ್ ಹಾಗೂ ಡೆಲಿವರಿ ಬಾಯ್ಸ್ (18 ರಿಂದ 35 ವರ್ಷದೊಳಗಿನವರು) ಅನುಭವವುಳ್ಳ ವರಿಗೆ ಆದ್ಯತೆ, ಸಂಪರ್ಕಿಸಿ :
**ಮಣಿಕಂಠ ಏಜೆನ್ಸೀಸ್**
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
9448233326, 7899135660

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ವಿನೋಬನಗರ, 1ನೇ ಮೇನ್, 2ನೇ ಕ್ರಾಸ್, ಸಂಪರ್ಕಿಸಿ :
97312 75402
(ಬಡವರಿಗೆ ಆದ್ಯತೆ)

**Teachers Wanted**
B.A / B.Sc - 2
D.Ed/NTC -1
Experienced Teachers Can Contact
Montesori Convent School
98807 43838

**ಸೈಟ್‌ಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆ 40x60, 30x50 ಉತ್ತರ, ಚಿಗಟೇರಿ ಲೇಔಟ್ 30x50, 20x30 ಉತ್ತರ ಸೈಟ್ ಕೊಳ್ಳಲು, ಮಾರಲು ಸಂಪರ್ಕಿಸಿ
99726 70257
98444 95581

**Cellar ಬಾಡಿಗೆಗೆ**
1350 Sq mtrs Space below Ladies P.G. Affordable Rent Add: 6th Main, BIET College Road, Near Bapuji High School, Kuvempu Nagar, Davanagere.
99725 35329

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಮಾರಾಟಕ್ಕೆ**
ಆವರಗೆರೆ (ಸಿದ್ದಲಿಂಗೇಶ್ವರ ಸ್ಕೂಲ್ ಹತ್ತಿರ) 30×50 (ಪೂರ್ವ), ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45 ಮತ್ತು 30×60 (ಪೂರ್ವ), ಸಿದ್ದವೀರಪ್ಪ ಬಡಾವಣೆ ಸೈಟ್(ಪಶ್ಚಿಮ) 48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
78996 36597, 99165 25828

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಮಹಿಳಾ ಪಿ.ಜಿ.**
ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಸ್ಥರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ.
ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಬಾಡಿಗೆಗೆ**
ಮನೆ ಮತ್ತು ಮಳಿಗೆ ಗೋಡೌನ್ ವಿದ್ಯಾರ್ಥಿ ಭವನ ಸರ್ಕಲ್ ಹತ್ತಿರ ಬಾಡಿಗೆಗೆ ಇದೆ.
ವಿಚಾರಿಸಿ
72043 06065

**ಕೆಲಸಕ್ಕೆ ಬೇಕಾಗಿದ್ದಾರೆ**
ಮನೆ ಕೆಲಸ ಮಾಡುವವರು 18-30 ವಯಸ್ಸಿನ ಮಹಿಳೆಯರು ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 8 ರಿಂದ ಸಂಜೆ 4 ರವರೆಗೆ
ವಿಳಾಸ : ಎಸ್.ಎಸ್. ಲೇಔಟ್, ಬಿ ಬ್ಲಾಕ್, ಗಡಿಯಾರ ವೃತ್ತದ ಹತ್ತಿರ, ದಾವಣಗೆರೆ.
96268 95105, 96263 44451

**ಮನೆ ಬಾಡಿಗೆ/ ಲೀಸ್‌ಗಿದೆ**
ಬಸವರಾಜ್ ಪೇಟೆ 1ನೇ ಮೇನ್, 1ನೇ ಕ್ರಾಸ್ ಡೋರ್ ನಂ.112/1 ಶ್ರೀರಂಗ ನಿಲಯದಲ್ಲಿ 2 ಬೆಡ್ ರೂಮಿನ ಒಂದು ಮನೆ, ಸಿಂಗಲ್ ಬೆಡ್‌ರೂಮಿನ 2 ಮನೆಗಳು, ಬೋರ್‌ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ (ಸಸ್ಯಹಾರಿಗಳಿಗೆ ಮಾತ್ರ)
94484 42446, 94810 39549

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. Rs.999sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30×40, 30x50
94829 48699, 94814 58699
86603 11021, 93431 10009

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Tuition Teacher Required**
B.A/M.A/B.Sc qualified teacher required for home tuiotion to teach 3rd std Student in K.B. Extension 5.30 PM - 8 PM/ 4000/- 5000/- per month
63616 62669

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134


# ಎಂಇಎಸ್ ಕಾರ್ಯಕರ್ತರ ಬಂಧನಕ್ಕೆ ಸು.ಕ.ವೇದಿಕೆ ಆಗ್ರಹ

ದಾವಣಗೆರೆ, ಡಿ.18- ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕನ್ನಡ ಬಾವುಟ ಸುಟ್ಟಿರುವ ಶಿವಸೇನೆ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯಕರ್ತರನ್ನು ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಸುವರ್ಣ ಕರ್ನಾಟಕ ವೇದಿಕೆ ಕಾರ್ಯಕರ್ತರು ನಗರದಲ್ಲಿ ನಿನ್ನೆ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಗಳಿಗೆ ಮನವಿ ಪತ್ರ ಸಲ್ಲಿಸಿದರು.

ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಆರ್.ಸಂತೋಷ್ ಕುಮಾರ್ ಮಾತನಾಡಿ, ಕನ್ನಡಿಗರನ್ನು ಮತ್ತು ರಾಜ್ಯ ಸರ್ಕಾರವನ್ನು ಕೆಣಕುತ್ತಿರುವ ಎಂಇಎಸ್ ಮತ್ತು ಶಿವಸೇನಾ ಪುಂಡರು ಬೆಳಗಾವಿಯ ಅಧಿವೇಶನ ನಡೆಯುವ ಸಂದರ್ಭದಲ್ಲಿ ಮರಾಠಿ ಮಹಾಮೇಳಾವ ನಡೆಸಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ಪಳನಿಸ್ವಾಮಿ, ಶಾಂತಕುಮಾರ್, ಶಿವಕುಮಾರ್, ಮುರುಗೇಶ್, ನಿಂಗಪ್ಪ, ಎಸ್. ನಾಗರಾಜ್, ನಾಗಪ್ಪ, ಶಿವಪ್ರಕಾಶ್, ಪ್ರಸಾದ್, ಕೊಟ್ರೇಶ್, ಬಸವರಾಜ್ ಹಾಜರಿದ್ದರು.

# ನಗರದಲ್ಲಿ ಇಂದು 'ಋಷಿಮೂಲ ಹುಡುಕೋಣ ಬನ್ನಿ' ಕಾರ್ಯಕ್ರಮ

ದಾವಣಗೆರೆ, ಡಿ.18- ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ನಾಡಿದ್ದು ದಿನಾಂಕ 19 ರಂದು ಭಾನುವಾರ ಸಂಜೆ 5 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ 'ಋಷಿಮೂಲ (ಜ್ಞಾನ)ಹುಡುಕೋಣ ಬನ್ನಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸಮಿತಿಯ ಅಜಯ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂದು ಸಂಜೆ 5 ರಿಂದ 6 ರವರೆಗೆ 'ಋಷಿ ಪರಂಪರೆಯ ಜ್ಞಾನ ದೀವಿಗೆ ಮತ್ತು ವಿಸ್ತೃತಿ' ಹಾಗೂ ಸಂಜೆ 6 ರಿಂದ 7 ರವರೆಗೆ 'ಪ್ರಾಚೀನ ಶಿಕ್ಷಣ ಪದ್ಧತಿಯು ಪ್ರಭಾವಿಸಿದ ರಾಷ್ಟ್ರೀಯ ಶಿಕ್ಷಣ ನೀತಿ' ಕುರಿತು ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರಾದ ರೋಹಿತ್ ಚಕ್ರತೀರ್ಥ ಉಪನ್ಯಾಸ ನೀಡಲಿದ್ದು, ರಘುನಂದ ಭಟ್ ನರೂರ ಸಮಾರೋಪ ನುಡಿಗಳನ್ನಾಡಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಕಾಶ್ ಕೋಲ್ಕುಂಟೆ ಉಪಸ್ಥಿತರಿದ್ದರು.

# ಆ್ಯಡಮ್ಸ್ ಕಂಪನಿಯ ಎಲೆಕ್ಟ್ರಿಕ್ ವಾಹನಗಳ ಶೋ ರೂಂ ಉದ್ಘಾಟನೆ



ದಾವಣಗೆರೆ, ಡಿ.18- ನಗರದ ಹದಡಿ ರಸ್ತೆಯಲ್ಲಿರುವ ಡಿಸಿಎಸ್ ಆರ್ಕೇಡ್ ಕಟ್ಟಡದಲ್ಲಿ ಶನಿವಾರ ನೂತನವಾಗಿ ಪ್ರಾರಂಭವಾಗಿರುವ ಶ್ರೀ ಗುರು ರೇಣುಕಾ ಏಜೆನ್ಸಿ ಆ್ಯಡಮ್ಸ್ ಕಂಪನಿಯ ಎಲೆಕ್ಟ್ರಿಕ್ ದ್ವಿ-ಚಕ್ರ ವಾಹನಗಳ ಶೋ ರೂಂ ಅನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಉದ್ಘಾಟಿಸಿದರು.

ಆ್ಯಡಮ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ತಂಗಡಗಿ, ನಿರ್ದೇಶಕರಾದ ಮಹೇಶ್, ಷಾಹೀನಾ ಸೈಯದ್, ದಾಮೋದರ್ ಬಿಲಾವರ್ ಮಲ್ಲಾಡಿ, ಸಂಜೀವ್ ಕಾಕಡೆ, ಶಾಸಕ ಎಂ.ಪಿ. ರೇಣುಕಾರ್ಯ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ರಿಷ್ಯಂತ್, ಜಿ.ಪಂ. ಸಿಇಓ ವಿಜಯ ಮಹಾಂತೇಶ್ ದಾನಮ್ಮನವರು, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ಮಾಜಿ ಮೇಯರ್ ಅಜಯ್ ಕುಮಾರ್, ಬಿಜೆಪಿ ಮುಖಂಡ ಕೆ.ಎಂ. ಸುರೇಶ್, ಡಾ. ಬಿ. ಚಂದ್ರಶೇಖರ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಬಿ.ಎಂ. ಜಗದೀಶ್ವರಸ್ವಾಮಿ, ಬಿ.ಎಂ. ಚನ್ನೇಶ್ ಸ್ವಾಮಿ, ಬಿ.ಎಂ. ಹಾಲಸ್ವಾಮಿ, ಮಂಜುನಾಥಸ್ವಾಮಿ, ಕೆ.ಜಿ. ರಂಗನಾಥ್ ಮತ್ತಿತರರು ಭಾಗವಹಿಸಿದ್ದರು.

ಶೋ ರೂಂ ಮಾಲೀಕ ಮಲೇಬೆನ್ನೂರಿನ ಬಿ.ಎಂ. ಜಗನ್ನಾಥ್ ಅವರು ಸ್ವಾಗತಿಸಿದರು.

# ನಗರದಲ್ಲಿ ಇಂದು ಯಕ್ಷಗಾನ ಶಿಬಿರ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷ ರಂಗ-ಯಕ್ಷಗಾನ ಸಂಸ್ಥೆಯ ಆಶ್ರಯದಲ್ಲಿ ಯಕ್ಷಗಾನ ತರಬೇತಿ ಶಿಬಿರವು ಇಂದು ಬೆಳಿಗ್ಗೆ 10.35ಕ್ಕೆ ಚೇತನ ಹೋಟೆಲ್ ಸಭಾಂಗಣದಲ್ಲಿ ನಡೆಯಲಿದೆ. ರವಿಚಂದ್ರ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಲ್ಯಾಡಿ ಪ್ರಭಾಕರ ಶೆಟ್ಟಿ ಅಧ್ಯಕ್ಷತೆ ವಹಿಸ ಲಿದ್ದಾರೆ. ಬಿ. ವಾಮದೇವಪ್ಪ, ಸದಾನಂದ ಹೆಗಡೆ ಆಗಮಿಸಲಿದ್ದಾರೆ.

# ರ್‍ಯಾಷ್ ಡ್ರೈವಿಂಗ್‌ಗೆ ಬ್ರೇಕ್ ಹಾಕಲಿ

**ಓದುಗರ ಪತ್ರ**

**ಮಾನ್ಯರೇ,**

ಪ್ರತಿಯೊಬ್ಬರ ಜೀವವೂ ಅಮೂಲ್ಯ. ಯಾರಿಗೂ ಯಾರ ಅಮೂಲ್ಯ ಜೀವವನ್ನು ತೆಗೆಯುವ ಹಕ್ಕಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ತಮ್ಮ ಶೋಕಿಗಾಗಿ ಬೈಕ್ ರೈಡ್ ಮಾಡುವ ಯುವಕರು ವಯಸ್ಸಾದವರ ಮತ್ತು ಮುಗ್ಧ ಮಕ್ಕಳ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿರುವುದು ಸಾಮಾನ್ಯ ಹಾಗೂ ಶೋಚನೀಯ. ರಸ್ತೆಯಲ್ಲಿ ಚಲಿಸುವವರ ಬಗ್ಗೆ ಪರಿವೆಯೇ ಇಲ್ಲದೆ ಅತ್ಯಂತ ವೇಗವಾಗಿ ಬೈಕ್ ರೈಡ್ ಮಾಡುತ್ತಾರೆ. ವಾಹನ ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡುವುದು ಕಾನೂನು ಬಾಹಿರವಾಗಿದ್ದರೂ ಮೊಬೈಲ್‌ನಲ್ಲಿ ಮಾತನಾಡಿಕೊಂಡು ವಾಹನ ಚಲಿಸುತ್ತಾ, ಏನೂ ತಪ್ಪಿಲ್ಲದೇ ನಡೆದುಕೊಂಡು ಹೋಗುತ್ತಿರುವವರ ಮೇಲೆ ಹಾಯ್ದು, ಅವರ ಜೀವ ಕಳೆಯುತ್ತಿದ್ದಾರೆ. ನಗರಗಳಲ್ಲಿ ಮಿತ ವೇಗದಲ್ಲಿ ವಾಹನ ಚಾಲನೆ ಮಾಡಬೇಕೆಂಬ ಕಾನೂನನ್ನು ಯುವಕರು ಪಾಲಿಸುವುದಿಲ್ಲ. ವಯಸ್ಸಾದವರು ರಸ್ತೆಗೆ ಬಂದರೆ ಜೀವವನ್ನು ಬಿಗಿ ಹಿಡಿದುಕೊಂಡು ಭಯದಿಂದ ಚಲಿಸಬೇಕಾಗುವ ಪರಿಸ್ಥಿತಿ ಇದೆ.

ಕಳೆದ ವಾರ ಎಂ.ಸಿ.ಸಿ 'ಬಿ' ಬ್ಲಾಕ್‌ನ ನಿವಾಸಿ, ಕ್ಲಾಸ್ ಒನ್ ಕಂಟ್ರಾಕ್ಟರ್ ಇಟಗಿ ಮಂಜುನಾಥ್ (58) ಕಾರಿನಿಂದ ರಸ್ತೆಗೆ ಇಳಿಯುವಾಗ ದಿಢೀರನೇ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಬಂದ ಯುವಕ ಅವರ ಮೇಲೆ ಅಪ್ಪಳಿಸಿದ್ದಾನೆ. ಗಾಡಿ ಅಪ್ಪಳಿಸಿದ ವೇಗಕ್ಕೆ ಅವರ ದೇಹ 15 ಅಡಿ ದೂರದವರೆಗೂ ಎಳೆದುಕೊಂಡು ಹೋಗಿ ಕುತ್ತಿಗೆ ಮತ್ತು ಬೆನ್ನಿನ ಭಾಗಕ್ಕೆ ವಿಪರೀತ ಪೆಟ್ಟಾಗಿ, ರಕ್ತ ಸೋರಿ ಅಲ್ಲೇ ಕೋಮಾ ಸ್ಥಿತಿಗೆ ತೆರಳುವಂತಾಗಿದೆ. ಕೊನೆಗೆ ಯಾವ ರೀತಿಯ ಚಿಕಿತ್ಸೆಯೂ ಸಹ ಫಲ ನೀಡದೆ, ಕೊನೆಯುಸಿರೆಳೆದಿದ್ದಾರೆ. ಅವರ ಜೀವ ತೆಗೆಯುವುದರ ಜೊತೆಗೆ ಅವರ ಹೆಂಡತಿ, ಮಕ್ಕಳು ಅನಾಥರಾಗುವಂತೆ ಮಾಡಿದ್ದಾನೆ. ಇದೊಂದು ಘೋರ ಅಪರಾಧ. ಇಂತಹ ಅನೇಕ ದುರ್ಘಟನೆಗಳು ಹಿಂದೆಯೂ ನಡೆದಿದ್ದು, ಇನ್ನು ಮುಂದಾದರೂ ನಿಲ್ಲಬೇಕಾಗಿದೆ.

ದಯವಿಟ್ಟು ಟ್ರಾಫಿಕ್ ಪೋಲೀಸರು ಈ ರೀತಿ ವೇಗವಾಗಿ ಚಲಿಸುವವರನ್ನು ಹಿಡಿದು, ಅವರ ಡ್ರೈವಿಂಗ್ ಲೈಸೆನ್ಸನ್ನು ಕ್ಯಾನ್ಸಲ್ ಮಾಡುವುದರ ಜೊತೆಗೆ, ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಅವಶ್ಯವಾಗಿದೆ. ರಸ್ತೆ ನಿಯಮಗಳನ್ನು ಪಾಲಿಸುವಂತೆ ಎಚ್ಚರಿಸಬೇಕು. ಇಲ್ಲವಾದಲ್ಲಿ ಅನೇಕ ಅಮಾಯಕರು ಇಂತಹ ಬುದ್ದಿಗೇಡಿಗಳ ಅಟ್ಟಹಾಸದಿಂದ ತಮ್ಮ ಜೀವವನ್ನು ಕಳೆದುಕೊಳ್ಳಬೇಕಾಗುತ್ತದೆ. ಹೆಚ್ಚಾಗಿ ಇತ್ತೀಚಿನ ವಿದ್ಯಾವಂತ ಯುವ ಪೀಳಿಗೆ ತಮ್ಮ ಬಿಸಿರಕ್ತದ ಅಮಲಿನಿಂದ ಮದ್ಯ, ಮಾದಕದ್ರವ್ಯಗಳ ಸೇವನೆಯಿಂದ ಅತ್ಯಂತ ವೇಗವಾಗಿ ಗಾಡಿ ಓಡಿಸುವುದನ್ನು ನೋಡಿದ್ದೇವೆ. ರಸ್ತೆಯಲ್ಲಿ ಹಂದಿ, ನಾಯಿಗಳು ಓಡಾಡುತ್ತಿರುತ್ತವೆ. ತಕ್ಷಣ ಬೈಕ್‌ಗೆ ಅಡ್ಡ ಬಂದಾಗ ತುಂಬಾ ವೇಗವಾಗಿ ಚಲಿಸುವ ಗಾಡಿಯನ್ನು ತಕ್ಷಣ ಕಂಟ್ರೋಲ್ ಮಾಡುವುದು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲೂ ಇಂತಹ ಅವಘಡಗಳು ಸಂಭವಿಸುತ್ತವೆ. ಯುವಜನತೆ ಬೇರೆಯವರ ಜೀವ ತೆಗೆಯುವುದರ ಜೊತೆಗೆ, ತಮ್ಮ ಜೀವವನ್ನೂ ಸಹ ಕಳೆದುಕೊಂಡು ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಾರೆ.

ದಯವಿಟ್ಟು ಪ್ರತಿಯೊಂದು ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕರು, ಮನೆಯ ಹಿರಿಯರು ಮುಂದೆ ಇಂತಹ ಅಚಾತುರ್ಯ ನಡೆಯದಂತೆ ತಮ್ಮ ಮಕ್ಕಳ ಬಗ್ಗೆ ಗಮನ ಹರಿಸಬೇಕು. ಅಲ್ಲದೇ, ಯುವಪೀಳಿಗೆಗೂ ಸಹ ತಮ್ಮ ತಪ್ಪಿನ ಅರಿವಾಗಬೇಕು. ಇದೊಂದು ಸಾಮಾಜಿಕ ಕಂಟಕವಾಗಿದ್ದು ಇದನ್ನು ನಿಯಂತ್ರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

- ಶಿವನಕೆರೆ ಬಸವಲಿಂಗಪ್ಪ
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ


**ಬೇಕಾಗಿದ್ದಾರೆ**
ಕಲೆಕ್ಷನ್ ಮಾಡಲು ಹುಡುಗರು ಬೇಕಾಗಿದ್ದಾರೆ.
(Full time job) ವಿದ್ಯಾರ್ಹತೆ PUC, Any degree. ವಯಸ್ಸು 18-30
ಶ್ರೀ ಗುರು ಚಿಟ್ ಫಂಡ್ಸ್ (ರಿ)
ಕುರುಬರ ವಿದ್ಯಾವರ್ಧಕ ಸಂಘ, 2ನೇ ಮಹಡಿ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ

NTTC ತರಬೇತಿ ಪಡೆಯಲು ಆಸಕ್ತ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. ವಿದ್ಯಾರ್ಹತೆ: SSLC ಪಾಸ್, PUC/BA, B. Com/B.Sc ಪಾಸ್ ಅಥವಾ ಫೇಲ್ (ನರ್ಸರಿ ಶಿಕ್ಷಕಿಯರ ತರಬೇತಿ ಕೋರ್ಸ್) 60 ಅಡಿ ರಿಂಗ್ ರಸ್ತೆ, ನಿಟುವಳ್ಳಿ ಜ್ಞಾನದೀಪ ಪಬ್ಲಿಕ್ ಸ್ಕೂಲ್ ಹತ್ತಿರ, ದಾವಣಗೆರೆ- 577004
94496 79346, 78291 92159

**ಸಂಪರ್ಕಿಸಿರಿ**
ಮನೆ ಮತ್ತು ಫ್ಯಾಕ್ಟರಿಯಲ್ಲಿ ನೀರಿನ ತೊಟ್ಟಿ (ಟ್ಯಾಂಕ್) ತೊಳೆಯಲು, ಆಫೀಸ್, ಮನೆ ಶಿಫ್ಟ್ ಮಾಡಲು, ಗಾರ್ಡನ್ ಕ್ಲೀನ್ ಮಾಡಲು ಕೆಲಸಗಾರರು ಸಿಗುತ್ತಾರೆ.
81971 15594
87327 49706

**ಮನೆ ಬಾಡಿಗೆಗೆ ಇದೆ**
2 BHK, Ground Floor/Second floor, ಮುನ್ಸಿಪಲ್ ಹಾಗೂ ಬೋರ್ ನೀರು ಸೌಕರ್ಯ ಇದೆ. ನಂ. 686, ಶ್ರೀ ರಾಮ ನಿವಾಸ, ಪಿ.ಜೆ. ಬಡಾವಣೆ, 8ನೇ ಮುಖ್ಯರಸ್ತೆ, ದಾವಣಗೆರೆ, ಲೂರ್ಡ್ಸ್ ಬಾಯ್ಸ್ ಶಾಲೆ ಹತ್ತಿರ.
87926 62185
96325 55910

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
1 BHK, 2 BHK, 3 BHK, 15x40sqft, 30x40 sqft
# 980, Ist Main, 3rd cross, S.Nijalingappa Layout, Davanagere.
94495 12272, 82178 33704

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ದಾಟಿ ಬನಶಂಕರಿ, ಡಾಲರ್ಸ್ ಕಾಲೋನಿಯಲ್ಲಿ 30×40 30×40 West ಅಕ್ಕ-ಪಕ್ಕ, 30×47 East, 30×63 Corner, 40×63 West, 70×63 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಮಾರಾಟಕ್ಕಿವೆ**
40×60 North ಮೂರು ಬೆಡ್ ರೂಮ್ ಮನೆ ಕುವೆಂಪು ಬಡಾವಣೆಯಲ್ಲಿ. 30×40 West, Two B.Room ಮನೆ ಹೊಸ ಮನೆ ಜಯನಗರದಲ್ಲಿ. 20×30 ಮನೆ J.H Patel ಬಡಾವಣೆಯಲ್ಲಿ. 30×40 North KHB 35 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**2 BHK ಮನೆ ಬಾಡಿಗೆಗಿದೆ**
ಕೆ.ಬಿ. ಬಡಾವಣೆ, ಕೆನರಾ ಬ್ಯಾಂಕ್ ಎದುರು, ದಾವಣಗೆರೆ.
99646 86492
ಸಸ್ಯಹಾರಿಗಳಿಗೆ ಮಾತ್ರ

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**2BHK ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿ ಬಾಪೂಜಿ MBA ಕಾಲೇಜ್ ಗೇಟ್ ಪಕ್ಕದಲ್ಲಿ ಮೊದಲನೆ ಮಹಡಿಯ 2 BHK ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಮಾತ್ರ
99643 27707
98864 94519

**ಸೈಟ್ ಮಾರಾಟಕ್ಕಿದೆ**
3300 ಚ.ಅಡಿ, 6 ತೆಂಗಿನ ಗಿಡ, ಆರ್‌ಸಿಸಿ ಮನೆ ಇರುವ ಕಕ್ಕರಗೊಳ್ಳ ಗ್ರಾಮದ ಕೋಡಿಹಳ್ಳಿ ರಸ್ತೆಗೆ ಲಗತ್ತಾಗಿರುವ ಸೈಟ್ ಮಾರಾಟಕ್ಕಿದೆ.
ಸಂಪರ್ಕಿಸಿ:
98449 42404, 82771 39240

**ಬೇಕಾಗಿದ್ದಾರೆ**
ಸೇಲ್ಸ್ ಮ್ಯಾನ್ ಕೆಲಸಕ್ಕೆ ಬೇಕಾಗಿದ್ದಾರೆ.
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
94823 73289

**ಮನೆ ಬಾಡಿಗೆಗೆ ಇದೆ**
2 BHK ಪೂರ್ವಕ್ಕೆ ಮುಖವಿರುವ 1ನೇ ಮಹಡಿ ಎಸ್.ಎಸ್. ಲೇಔಟ್ 'ಎ' ಬ್ಲಾಕ್ 9ನೇ ಕ್ರಾಸ್ ಅಥಣಿ ಕಾಲೇಜ್ ಹತ್ತಿರ ಬಾಡಿಗೆಗೆ ಇದೆ.
90085 26334

**ಮನೆ ಬಾಡಿಗೆ/ಮಾರಾಟಕ್ಕಿದೆ**
ಆಂಜನೇಯ ಬಡಾವಣೆ,# 2035/72, ನೆಲ ಮಹಡಿ ಉತ್ತರ ದಿಕ್ಕಿನ ಎಲ್ಲಾ ಸೌಲಭ್ಯವಿರುವ 2BHK ಮನೆ ಬಾಡಿಗೆಗೆ ಇದೆ. ಮತ್ತು ಗ್ರೌಂಡ್ ಫ್ಲೋರ್ 9 Sqft, ಫಸ್ಟ್ ಫ್ಲೋರ್ 11 Sqft ಇರುವ 2 BHK ಮನೆ ಮಾರಾಟಕ್ಕಿವೆ. ವಿಚಾರಿಸಿ
98441 58279, 81477 58354

**ಸೈಟ್‌ಗಳು ಮಾರಾಟಕ್ಕಿವೆ**
ಕೆ.ಎಸ್.ಆರ್. ಲೇಔಟ್, ಎಪಿಎಂಸಿ ಹಿಂಭಾಗ, ಪೂರ್ವ ದಿಕ್ಕಿನ 30x50 ಎರಡು ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ
83107 72277

**HOUSE TO LET**
1 BHK Fully Furnished 2nd floor, 1 BHK Semi Furnished Ist Floor Address : 19th Main, Kuvempu Nagar, Behind Bapuji High School
98444 75681

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೊಂಬಾಳ್ ಇ-ಕಾಮರ್ಸ್**
ಎ.ಪಿ.ಎಂ.ಸಿ. ಯಾರ್ಡ್ 'ಇ' ಬ್ಲಾಕ್, ದಾವಣಗೆರೆ.
ದಿನಸಿ ಕಾಳುಗಳನ್ನು ಕ್ಲೀನಿಂಗ್ ಮಾಡಿ ಪ್ಯಾಕ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ದಿನಕ್ಕೆ ರೂ.220/-, PF, ESI ಇರುತ್ತದೆ.
ಫೋ. : 99865 78787

**WANTED**
Teaching & Non Teaching Art's/Commerce. Science (PCMB) Diploma. Bsc., Diploma & BE., Davangere.
85532 78258, 9019580600

**ಹೆಸರು ತಿದ್ದುಪಡಿ**
ದಾವಣಗೆರೆ ವಿದ್ಯಾನಗರ ಎಲ್.ಐ.ಸಿ ಕಾಲೋನಿ # 1859/13, 4ನೇ ಮೇನ್ ವಾಸಿಯಾದ ದರ್ಶನ್ ಕೆ.ಎಂ. ಎಂಬ ನಾನು ಸ್ಪಷ್ಟೀಕರಿಸುವುದೇನೆಂದರೆ ಆಧಾರ ಕಾರ್ಡ್‌ನಲ್ಲಿ ನನ್ನ ಹೆಸರು ದರ್ಶನ್ ಕೆ.ಎಂ. ಎಂದು ಸರಿಯಾಗಿ ನಮೂದಾಗಿದೆ. ಆದರೆ ಡಿ.ಎಲ್‌ನಲ್ಲಿ ಕೆ.ಎಂ. ದರ್ಶನ್ ಎಂದಾಗಿದೆ. ಈ ಎರಡೂ ಹೆಸರು ನನ್ನವೇ ಆಗಿದ್ದು ನನ್ನ ಹೆಸರನ್ನು ದರ್ಶನ ಕೆ.ಎಂ. ಎಂದು ನೋಟರಿಯವರ ಸಮ್ಮುಖದಲ್ಲಿ ತಿದ್ದುಪಡಿ ಮಾಡಿಸಿದ್ದೇನೆ.
ದರ್ಶನ್ ಕೆ.ಎಂ.

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂಸಿಸಿ ಎ ಬ್ಲಾಕ್, 10ನೇ ಮೇನ್, 2ನೇ ಕ್ರಾಸ್, 'ಜಯಗುರು ಪ್ರಸನ್ನ' ನಿಲಯದಲ್ಲಿ ಗ್ರೌಂಡ್ ಫ್ಲೋರ್, 2 BHK (ನಂ. 2388/1) ಮನೆ ಬಾಡಿಗೆಗೆ ಇದೆ.
99867 20984

**1BHK For Rent**
1st Floor, North Facing , Borewell + Municipality Water available. Rent (6.5K) Shivakumar swamy Badavane 2nd stage 6th B Cross.
Contact
99001 91706 96636 31057

**ಬೇಕಾಗಿದ್ದಾರೆ**
MCC B ಬ್ಲಾಕ್, ದಾವಣಗೆರೆಯಲ್ಲಿರುವ ಹೋಮಿಯೋಪಥಿ ಕ್ಲಿನಿಕ್‌ಗೆ ಆಫೀಸ್ ಅಸಿಸ್ಟೆಂಟ್/ಹೆಲ್ಪರ್ಸ್‌ಗೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಪಿಯುಸಿ, ವಯಸ್ಸು: 26
98452 39411, 91482 90536

**ನೆಲ ಬಾಡಿಗೆಗೆ**
ಲಕ್ಷ್ಮಿ ಫ್ಲೋರ್ ಮಿಲ್ ಎದುರು 40x60 ಕಾರ್ನರ್ ಸೈಟ್ ನೆಲ ಬಾಡಿಗೆಗೆ ಇದೆ.
63610 59489

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಆಸ್ತಿಗಳಲ್ಲಿ ಪಾಲು ವಿಭಾಗ**
ನಿಮ್ಮ ಕುಟುಂಬದ ಆಸ್ತಿಗಳಾದ ಮನೆ, ಸೈಟು, ಜಮೀನುಗಳಿಂದ ನಿಮ್ಮ ಭಾಗಕ್ಕೆ ಬರಬೇಕಾದ ಪಾಲನ್ನು ಪಡೆಯಲು ಸಂಪರ್ಕಿಸಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಪ್ರಾಂಸರಿ ನೋಟಿನ ಬಗ್ಗೆ**
ಪ್ರಾಂಸರಿ ನೋಟು ಬರೆದುಕೊಟ್ಟು ನಿಮ್ಮಿಂದ ಸಾಲ ಪಡೆದ ಬಾಬ್ತು ಹಾಗೇ ಬಾಕಿ ಉಳಿಯುತ್ತಾ ಬಂದಿರುವ ಹಣ ಬಡ್ಡಿ ಸಮೇತ ಮರಳಿ ಪಡೆಯಲು ಸಂಪರ್ಕಿಸಿ:
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ಕುಡುಕರಿಗೆ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ಮೊ : 81339 33804

**ಬೇಕಾಗಿದ್ದಾರೆ**
ಜೆ.ಎಂ.ಐ.ಟಿ ಅತಿಥಿ ಗೃಹದಲ್ಲಿ ಕಾರ್ಯನಿರ್ವಹಿಸಲು ಅನುಭವವುಳ್ಳ ಅಡುಗೆ ಭಟ್ಟರು, ಸೂಪರ್‌ವೈಜರ್, ಸರ್ವರ್‌ಗಳು ತಕ್ಷಣ ಬೇಕಾಗಿದ್ದಾರೆ.
84948 84444

**WANTED**
FOR Sales & OFFICE WORK (MALE)
Age 18 to 35
Driving licence must.
NEEMS DISTRIBUTOR
# 574/1 6th main road. P.J. Extension

**ಸೈಟ್ ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಹಿಂಭಾಗ 30x40 ಪಶ್ಚಿಮ ಅಕ್ಕ-ಪಕ್ಕ ಸೈಟ್‌ಗಳು ಮಾರಾಟಕ್ಕಿವೆ.
86181 82332

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಹ್ ಚಾಯ್ !!**
**ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಜನತಾ ಖಾದಿ ಭಂಡಾರ
ಬಾಪೂಜಿ ಖಾದಿ ಭಂಡಾರ
ಅಶೋಕ ರಸ್ತೆ, ದಾವಣಗೆರೆ

**HIRING**
MANAGEMENT EMPLOYEE (1-3 YEARS EXPERIENCE)
SALES MAN (3-5 YEARS EXPERIENCE)
IN PHARMACEUTICAL BUSINESS
CONTACT : 74066 59695

**ಬೇಕಾಗಿದ್ದಾರೆ**
ಶ್ರೀ ವೀರಭದ್ರೇಶ್ವರ ಬೇಕರಿ (ಬೇಕರ್ ಪ್ಯಾಲೇಸ್) ಇಲ್ಲಿ ಬೇಕರಿ ತಿನಿಸುಗಳನ್ನು ತಯಾರಿಸಲು ಅನುಭವವುಳ್ಳ ತಯಾರಕರು (Bakery Item Makers) ಬೇಕಾಗಿರುತ್ತಾರೆ.
7676688599
9964177873

**2-BHK House for rent**
Swamy vivekananda badavane 1st main 2nd cross near Bapuji Engineering college, SPSMR school Davangere. water facility 24/7
99807 27419, 74110 77419

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಯುವಕ/ಯುವತಿಯರು ಬೇಕಾಗಿದ್ದಾರೆ.
MANCA PHARMA
Vidyanagar Main Road, Davangere.
81054 40008

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
96200 95520

# ಮೂರು ದಿನಗಳಲ್ಲೇ ದುಪ್ಪಟ್ಟು ಹರಡುತ್ತಿರುವ ಓಮಿಕ್ರಾನ್

ಜಿನೇವಾ, ಡಿ. 18 – ಇದುವರೆಗೂ ಓಮಿಕ್ರಾನ್ ರೂಪಾಂತರಿ 89 ದೇಶಗಳಲ್ಲಿ ಕಂಡು ಬಂದಿದ್ದು, ಡೆಲ್ಟಾಗಿಂತ ವೇಗವಾಗಿ ಸಮುದಾಯಗಳಲ್ಲಿ ಹರಡುತ್ತಿದೆ. ಓಮಿಕ್ರಾನ್ ಪ್ರಕರಣಗಳು 1.5ರಿಂದ ಮೂರು ದಿನಗಳಲ್ಲೇ ಎರಡು ಪಟ್ಟು ಹೆಚ್ಚಾಗುತ್ತಿವೆ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂ.ಹೆಚ್.ಓ.) ತಿಳಿಸಿದೆ.

ಸಮುದಾಯ ಹರಡುವಿಕೆಯಲ್ಲಿ ಡೆಲ್ಟಾ ರೂಪಾಂತರಿಯನ್ನು ಓಮಿಕ್ರಾನ್ ಹಿಂದೆ ಹಾಕಲಿದೆ. ರೋಗ ನಿರೋಧಕತೆ ಹೆಚ್ಚಾಗಿರುವ ದೇಶಗಳಲ್ಲೂ ಓಮಿಕ್ರಾನ್ ಹರಡುತ್ತಿದೆ. ರೋಗ ನಿರೋಧಕತೆಯನ್ನು ಓಮಿಕ್ರಾನ್ ಮೀರುತ್ತಿರುವುದು ಇಲ್ಲವೇ ಹರಡುವಿಕೆಯ ವೇಗ ಹೆಚ್ಚಾಗಿರುವುದು ಅಥವಾ ಎರಡೂ ಇದಕ್ಕೆ ಕಾರಣವಾಗಿರಬಹುದು ಎಂದು ಡಬ್ಲ್ಯೂ.ಹೆಚ್.ಓ. ಹೇಳಿದೆ.

# ಸದನದಲ್ಲಿನ ಮಾಜಿ ಸ್ಪೀಕರ್ ಹೇಳಿಕೆಗೆ ವನಿತಾ ಸಾಹಿತ್ಯ ವೇದಿಕೆ ಖಂಡನೆ

ದಾವಣಗೆರೆ, ಡಿ.18- ವಿಧಾನಸಭೆಯಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರು ಮಹಿಳೆಯರ ಕುರಿತಂತೆ ಅಮಾನವೀಯ ಹಾಗೂ ಹೇಯಕರವಾಗಿ ಮಾತನಾಡಿರುವುದು ಖಂಡನಾರ್ಹ ಎಂದು ನಗರದ ವನಿತಾ ಸಮಾಜದ ಅಂಗ ಸಂಸ್ಥೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ತಿಳಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮನಾಗರಾಜ್, ರಮೇಶ್ ಅವರ ಮಡದಿ ಅಥವಾ ಮಗಳು ಇಂತಹ ಸ್ಥಿತಿಗೆ ಒಳಗಾಗಿದ್ದರೆ, ಇವರಿಂದ ಇಂತಹ ನುಡಿ ಮುತ್ತುಗಳೇ ಉದುರುತ್ತಿದ್ದವೇ? ಎಂದು ಕೇಳಿದ್ದಾರೆ.

ಭಾರತೀಯ ಸಂಸ್ಕೃತಿಯ ಬಗೆಗೆ ನೂರಾರು ಮಾತನಾಡುವ ರಮೇಶ್ ಕುಮಾರ್ ಅವರಿಗೆ ಮಹಿಳೆಯರ ಗೌರವದ ಬಗೆಗೆ ಎಳ್ಳಷ್ಟೂ ಚಿಂತನೆಯಿಲ್ಲವೇ? ಅತ್ಯಾಚಾರಿಗಳನ್ನು ಶಿಕ್ಷಿಸುವುದಕ್ಕಿಂತ ಮೊದಲು ರಮೇಶ್ ಕುಮಾರ್ ಅವರಂತಹ ಗಣ್ಯಮಾನ್ಯರಿಗೆ ಶಿಕ್ಷೆಯಾಗಬೇಕು ಎಂದು ಅವರು ಹೇಳಿದ್ದಾರೆ.

ಕೇವಲ ಕ್ಷಮೆ ಕೇಳುವುದರಿಂದ ಅವರನ್ನು ಕ್ಷಮಿಸಲಾಗದು. ಮತ್ತೆಂದೂ ಮಹಿಳೆಯರ ಬಗೆಗೆ ಹೀನಾಯವಾಗಿ ಮಾತನಾಡದಂತೆ ನ್ಯಾಯಾಂಗ ಅತ್ಯಂತ ಕಟುವಾದ ನಿಯಮಗಳನ್ನು ರೂಪಿಸಿ, ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# ದೂಡಾ ಅಧ್ಯಕ್ಷರಿಂದ ಕಾಮಗಾರಿ ವೀಕ್ಷಣೆ



ದಾವಣಗೆರೆ, ಡಿ.18 - ನಗರದ ಹೊಂಡದ ವೃತ್ತದಲ್ಲಿ ವೀರ ಮದಕರಿ ನಾಯಕ ಪ್ರತಿಮೆ ಕಾಮಗಾರಿಯನ್ನು ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಹಾಗೂ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮನೋಹರ ಪೈಲ್ವಾನ್, ರಾಮಣ್ಣ, ಕಿಶೋರ್ ಕುಮಾರ್, ರಘು ಕರಿಗಾರ, ಪ್ರವೀಣ್ ರಾವ್ ಜಾಧವ್, ಟಿಂಕರ್ ಮಂಜಣ್ಣ ಉಪಸ್ಥಿತರಿದ್ದರು.

# ನಿಗದಿತ ಅವಧಿಯಲ್ಲಿ ತೆರಿಗೆ ರಿಟರ್ನ್ ಫೈಲ್ ಮಾಡಿದರೆ ಉತ್ತಮ

## ದಾವಣಗೆರೆ ವಿಭಾಗದ ಆದಾಯ ತೆರಿಗೆ ಜಂಟಿ ಆಯುಕ್ತ ಎಸ್. ನಟರಾಜ್




ದಾವಣಗೆರೆ, ಡಿ.18- ಆದಾಯ ತೆರಿಗೆ ಇಲಾಖೆ ಕರ ನಿರ್ಧರಣೆ ಫೇಸ್‌ಲೆಸ್ ಆದರೂ ಸಹ ಆದಾಯ ತೆರಿಗೆ ಇಲಾಖೆಯು ತೆರಿಗೆ ದಾರರ ಎಲ್ಲಾ ರೀತಿಯ ಆರ್ಥಿಕ ವ್ಯವಹಾರಗಳನ್ನು ಗಮನಿಸುತ್ತಿದ್ದು, ಆಯಾಯ ಕ್ಷೇತ್ರೀಯ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಸ್ಥಳೀಯ ಮಾಹಿತಿಗಳನ್ನು ಪಡೆಯುತ್ತಿದೆ ಎಂದು ಈಚೆಗೆ ದಾವಣಗೆರೆ ವಿಭಾಗದ ಆದಾಯ ತೆರಿಗೆ ಜಂಟಿ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿರುವ ಎಸ್. ನಟರಾಜ್ ತಿಳಿಸಿದರು.

ನಗರದ ಹದಡಿ ರಸ್ತೆಯಲ್ಲಿರುವ ಆದಾಯ ತೆರಿಗೆ ಕಛೇರಿಯಲ್ಲಿ ದಾವಣಗೆರೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಹಾಗೂ ದಾವಣಗೆರೆ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ಸದಸ್ಯರುಗಳೊಂದಿಗೆ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಸಭೆಯುದ್ದೇಶಿಸಿ ಅವರು ಮಾತನಾಡಿದರು.

ತೆರಿಗೆದಾರರು ತಮ್ಮ ಪ್ರತಿ ವರ್ಷದ ಆದಾಯ ತೆರಿಗೆ ರಿಟರ್ನ್‌ಗಳನ್ನು ಕಡ್ಡಾಯವಾಗಿ ಗಡುವಿನ ಅಂತಿಮ ದಿನಾಂಕದ ಒಳಗೆ ಫೈಲ್ ಮಾಡಿದಲ್ಲಿ ಮುಂದೆ ಬರಬಹುದಾದ ಅತಿ ಹೆಚ್ಚಿನ ಬಡ್ಡಿ, ದಂಡಗಳಿಂದ ಮುಕ್ತಿ ಪಡೆಯಬಹುದು ಎಂದು ತಿಳಿಸಿದರು.

ದಾವಣಗೆರೆ ಸಿಎ ಅಸೋಸಿಯೇಷನ್ ಅಧ್ಯಕ್ಷ ಕಿರಣ್ ಎಸ್. ಪಾಟೀಲ್ ಮಾತನಾಡಿ, ಕಳೆದ ಎರಡು ವರ್ಷಗಳ ನಂತರ ಇಂತಹ ಕಾರ್ಯಕ್ರಮ ಆಯೋಜಿಸಿದ ಆದಾಯ ತೆರಿಗೆ ಇಲಾಖೆಗೆ ಅಭಿನಂದನೆ ತಿಳಿಸಿ, ಇತ್ತೀಚಿನ ಆದಾಯತೆರಿಗೆ ಇಲಾಖೆಯ ಹೊಸ ವೆಬ್‌ಸೈಟ್‌ನಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಇಲಾಖೆಯ ಗಮನ ಸೆಳೆದರು.

ಹಿರಿಯ ಸನ್ನದು ಲೆಕ್ಕ ಪರಿಶೋಧಕ ಕಿರಣ್‌ಕುಮಾರ್ ಮಾತನಾಡಿ, ಇಲಾಖೆಯ ನೋಟೀಸುಗಳು ಇ-ಮೇಲ್ ಮುಖಾಂತರ ಬರುವುದರಿಂದ ಸಾಕಷ್ಟು ಆದಾಯ ತೆರಿಗೆ ಪಾವತಿದಾರರಿಗೆ ಈ ಬಗ್ಗೆ ಅರಿವು ಇರದೇ ಒಂದೇ ಬಾರಿ ದಂಡದ ನೋಟೀಸುಗಳು ಅವರ ಕೈ ಸೇರುತ್ತವೆ. ಇದರ ಬದಲಿಗೆ ಮೊದಲಿನ ನೋಟೀಸು ಅವರ ಕೈ ಸೇರುವಂತೆ ಮಾಡಿದಲ್ಲಿ, ಇಂತಹ ಏಕಪಕ್ಷೀಯ ತೆರಿಗೆ, ದಂಡ ಹಾಗೂ ಬಡ್ಡಿಯಿಂದ ತೆರಿಗೆ ಪಾವತಿದಾರರಿಗೆ ಆಗುವ ಅನ್ಯಾಯ ತಪ್ಪಿಸಬಹುದು ಎಂದು ಇಲಾಖೆಯ ಅಧಿಕಾರಿಗಳ ಗಮನ ಸೆಳೆದರು.

ಹಿರಿಯ ಆದಾಯ ತೆರಿಗೆ ಅಧಿಕಾರಿ ಭಾಸ್ಕರ್ ಮಾತನಾಡಿ, ಈಗಾಗಲೇ ಹಳೇ ಬಾಕಿ ವಸೂಲಿಗೆ ಇಲಾಖೆ ಕ್ರಮ ಕೈಗೊಂಡಿದ್ದು, ಒಂದು ವೇಳೆ ಬಾಕಿ ವಸೂಲಿಗೆ ತಡೆಗಾಗಿ ಮೊದಲು ಕ್ಷೇತ್ರೀಯ ಆದಾಯ ತೆರಿಗೆ ಅಧಿಕಾರಿಗೆ ಮನವಿ ಸಲ್ಲಿಸಿ, ಅವರು ನೀಡುವ ಆದೇಶದ ವಿರುದ್ಧ ಪ್ರಧಾನ ಆದಾಯ ತೆರಿಗೆ ಕಮೀಷನರ್ ಅವರಿಗೆ ಮನವಿ ಸಲ್ಲಿಸಬೇಕು. ಅಲ್ಲೂ ನ್ಯಾಯ ಸಿಗದಿದ್ದರೆ ಮಾತ್ರ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸಿಎ ಅಸೋಸಿಯೇಷನ್ ಕಾರ್ಯದರ್ಶಿ ಉಮೇಶ್ ಶೆಟ್ಟಿ, ಕ್ಷೇತ್ರೀಯ ಆದಾಯ ತೆರಿಗೆ ಅಧಿಕಾರಿ ಪ್ರಕಾಶ್ ಹಲಗೇರಿ ಮತ್ತು ಇತರರು ಭಾಗವಹಿಸಿದ್ದರು.

# ವಸತಿ ನಿಲಯಗಳಲ್ಲಿ ಸ್ವಚ್ಛತೆಗೆ ಕಟ್ಟುನಿಟ್ಟಿನ ಸೂಚನೆ

ಜಗಳೂರು, ಡಿ.18- ತಾಲ್ಲೂಕಿನ ಎಲ್ಲಾ ವಸತಿ ನಿಲಯಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಿರುವುದಾಗಿ ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದ್ದಾರೆ.



ಜಗಳೂರು

ಪಟ್ಟಣದ ಹೊರವಲಯದಲ್ಲಿರುವ ಮೌಲಾನ ಅಬ್ದುಲ್ ಕಲಾಂ ವಸತಿಯುತ ಶಾಲೆ ಮತ್ತು ಆಸ್ಪತ್ರೆಯಲ್ಲಿರುವ ಮಕ್ಕಳಿಗೆ ಹಣ್ಣು ವಿತರಣೆ ಮಾಡಿ ಮಾತನಾಡಿದ ಶಾಸಕರು, ಹಾಸ್ಟೆಲ್‌ನಲ್ಲಿ ವಿಷ ಆಹಾರ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥರಾದ ಘಟನೆ ಆಕಸ್ಮಿಕವಾಗಿ ಜರುಗಿದ್ದು, ಪೋಷಕರು, ವಿದ್ಯಾರ್ಥಿಗಳು ಆತಂಕ್ಕೊಳಗಾಗಬಾರದು ಎಂದು ಹೇಳಿದರು.

ಹಾಸ್ಟೆಲ್‌ಗಳಲ್ಲಿ ಅಡುಗೆ ಸಿಬ್ಬಂದಿಗಳು, ಮೇಲ್ವಿಚಾರಕರ ಜವಾಬ್ದಾರಿ ಮಹತ್ವದ್ದು. ತರಕಾರಿಗಳನ್ನು ಸ್ವಚ್ಚಗೊಳಿಸಿ ಅಡುಗೆ ಮಾಡಬೇಕು. ಆತುರವಾಗಿ ಅಡುಗೆ ತಯಾರಿಸುವುದರಿಂದ ಇಂತಹ ಘಟನೆಗಳು ಜರುಗುತ್ತವೆ. ಮುಂದೆ ಇಂತಹ ಘಟನೆಗಳು ನಡೆಯಬಾರದು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಲೆಯಲ್ಲಿರುವ ಮಕ್ಕಳು ನಿಮ್ಮಮನೆಯ ಮಕ್ಕಳಿದ್ದಂತೆ. ಅವರ ಸೇವೆಗಾಗಿಯೇ ನೇಮಕವಾಗಿರುವ ನೀವು, ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಹಾಸ್ಟೆಲ್ ಸಿಬ್ಬಂದಿ ವರ್ಗದವರಿಗೆ ಹೇಳಿದರು.

ಮಂಡಲ ಅಧ್ಯಕ್ಷ ಹೆಚ್.ಸಿ.ಮಹೇಶ್, ಪಟ್ಟಣ ಪಂಚಾಯಿತಿ ಅಧ್ಯಕ್ಷ ಎಸ್. ಸಿದ್ದಪ್ಪ ಹಾಗೂ ಅಲ್ಪಸಂಖ್ಯಾತ ಇಲಾಖೆಯ ಜಿಲ್ಲಾಧಿಕಾರಿ ಅಮಿತ್, ತಾಲ್ಲೂಕು ಸಮಾಜಕಲ್ಯಾಣ ಇಲಾಖೆ ಅಧಿಕಾರಿ ಬಿ.ಮಹೇಶ್ವರಪ್ಪ ಸೇರಿದಂತೆ, ವಿವಿಧ ಘಟಕದ ಪದಾಧಿಕಾರಿಗಳು ಪ.ಪಂ. ಸದಸ್ಯರು ಭಾಗವಹಿಸಿದ್ದರು.

# ಟಿಪ್ಪರ್ ಲಾರಿ ಹರಿದು ಮಹಿಳೆಯ ಧಾರುಣ ಸಾವು

ದಾವಣಗೆರೆ, ಡಿ.18- ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ ಲಾರಿಯು ಮೈ ಮೇಲೆ ಹರಿದ ಪರಿಣಾಮ ಮಹಿಳೆಯೋರ್ವರು ಸ್ಥಳದಲ್ಲಿಯೇ ಧಾರುಣವಾಗಿ ಮೃತಪಟ್ಟಿರುವ ಘಟನೆ ನಗರದ ಪಿಬಿ ರಸ್ತೆಯ ರೇಣುಕಾ ಮಂದಿರ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಸೈಯದ್ ಮೆಹರುನ್ನೀಸಾ (48) ಸಾವನ್ನಪ್ಪಿದ ದುರ್ದೈವಿ ಮಹಿಳೆ. ನಗರದ ಹೊರವಲಯದ ಕರೂರು ವಾಸಿ ಮೆಹರುನ್ನೀಸಾ ಅರುಣ ಚಿತ್ರಮಂದಿರದ ಕಡೆಯಿಂದ ಗಾಂಧಿ ವೃತ್ತದ ಕಡೆಗೆ ರೇಣುಕಾ ಮಂದಿರ ರಸ್ತೆಯ ಮಾರ್ಗವಾಗಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಅದೇ ಸಮಯಕ್ಕೆ ಹಿಂದಿನಿಂದ ಬಂದ ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಮಹಿಳೆ ಲಾರಿಯ ಚಕ್ರದಡಿ ಬಿದ್ದಾಗ, ಚಕ್ರ ಆಕೆಯ ಮೇಲೆಯೇ ಹರಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ ಎನ್ನಲಾಗಿದೆ.

ಈ ಬಗ್ಗೆ ದಕ್ಷಿಣ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

# ಹರಿಹರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಸ್ವಚ್ಛತಾ ಕಾರ್ಯಕ್ರಮ

ನನ್ನ ಊರು ನನ್ನ ಹೊಣೆ ಬಳಗ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಇಂದು ಬೆಳಿಗ್ಗೆ 7ಕ್ಕೆ ರಾಘವೇಂದ್ರ ಸ್ವಾಮಿ ಮಠದ ಹಿಂಭಾಗದ ತುಂಗಭದ್ರಾ ನದಿ ಪಾತ್ರದ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಆರ್ ರಾಘವೇಂದ್ರ, ರವಿಶಂಕರ್ ಗದ್ದಿಗಿಮಠ ತಿಳಿಸಿದರು.

# ರೈತ ಮುಖಂಡನಿಂದ ಪಕ್ಷ ಸ್ಥಾಪನೆ

## ಎಲ್ಲಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿರುವ ಚಡುನಿ ಪಕ್ಷ

ಚಂಡೀಘಡ, ಡಿ. 16 - ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಗುರ್ನಾಮ್ ಸಿಂಗ್ ಚಡುನಿ ಅವರು ಪಂಜಾಬ್ ವಿಧಾನಸಭಾ ಚುನಾವಣೆಗಾಗಿ ಹೊಸ ಪಕ್ಷವನ್ನು ಸ್ಥಾಪಿಸಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಸ್ಥಾಪಕ ಸದಸ್ಯರಾಗಿ ರುವ ಚಡುನಿ, ಈಗ ಚುನಾವಣೆಗಾಗಿ ಸಂಯುಕ್ತ ಸಂಘರ್ಷ ಪಾರ್ಟಿ ಸ್ಥಾಪಿಸಿದ್ದಾರೆ. ಎಸ್.ಕೆ.ಎಂ. ವರ್ಷಕ್ಕೂ ಹೆಚ್ಚು ಅವಧಿಗೆ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸಿತ್ತು. ಈಗ ಕಾಯ್ದೆಗಳನ್ನು ವಾಪಸ್ ಪಡೆಯಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಚಡುನಿ, ಸಂಯುಕ್ತ ಸಂಘರ್ಷ ಪಾರ್ಟಿಯು ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲಿದೆ. ರಾಜಕೀಯ ಶುದ್ಧೀಕರಣ ಹಾಗೂ ಜನರ ಅಭಿವೃದ್ಧಿ ನಮ್ಮ ಉದ್ದೇಶ ಎಂದವರು ಹೇಳಿದ್ದಾರೆ. ರಾಜ್ಯದ ಎಲ್ಲಾ 117 ಕ್ಷೇತ್ರಗಳಲ್ಲಿ ತಮ್ಮ ಪಕ್ಷ ಸ್ಪರ್ಧಿಸಲಿದೆ. ಆದರೆ, ನಾನು ಚುನಾವಣಾ ಕಣಕ್ಕಿಳಿಯುವುದಿಲ್ಲ ಎಂದವರು ತಿಳಿಸಿದ್ದಾರೆ.

# ಕೋಲ್ಕುಂಟೆಯಲ್ಲಿಂದು ಕೆರೆ ಹಸ್ತಾಂತರ

ದಾವಣಗೆರೆ, ಡಿ.18- ತಾಲ್ಲೂಕಿನ ಕೋಲ್ಕುಂಟೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ನಾಡಿದ್ದು ದಿನಾಂಕ 19 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕೆರೆಯ ಆವರಣದಲ್ಲಿ 'ನಮ್ಮೂರು- ನಮ್ಮ ಕೆರೆ' ಕಾರ್ಯಕ್ರಮದಡಿಯಲ್ಲಿ ಪುನಶ್ಚೇತನಗೊಳಿಸಲಾದ ಕೋಲ್ಕುಂಟೆ ಕೆರೆಯ ಹಸ್ತಾಂತರ ಕಾರ್ಯಕ್ರಮ ಹಾಗೂ ವಿವಿಧೋದ್ದೇಶ ಸಮುಚ್ಛಯ ನಿರ್ಮಾಣದ ಭೂಮಿಪೂಜೆ ಹಮ್ಮಿಕೊಳ್ಳಲಾಗಿದೆ.

ಚಿತ್ರನಟ ಸುಚೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಕೆರೆಗೆ ಬಾಗಿನ ಅರ್ಪಿಸಲಿದ್ದಾರೆ. ಶಾಸಕ ಎಸ್.ಎ. ರವೀಂದ್ರನಾಥ ನಾಮಫಲಕ ಅನಾವರಣಗೊಳಿಸುವರು. ಪ್ರೊ. ಎನ್. ಲಿಂಗಣ್ಣ ಕೆರೆ ಹಸ್ತಾಂತರ ಮಾಡಲಿದ್ದಾರೆ. ಎಂ.ಪಿ. ರೇಣುಕಾಚಾರ್ಯ ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ. ಶಾಮನೂರು ಶಿವಶಂಕರಪ್ಪ, ಕೆ.ಎಸ್. ನವೀನ್, ಎಸ್.ಎಸ್. ಮಲ್ಲಿಕಾರ್ಜುನ್, ಎಂ. ಬಸವರಾಜನಾಯ್ಕ, ಮಹಾಂತೇಶ್ ಬೀಳಗಿ, ಶರತ್ ಲೋಹಿತಾಶ್ವ, ರಾಜಶೇಖರ್, ಬಿ.ಎನ್. ಗಿರೀಶ್, ಜಯಂತ್ ಪೂಜಾರಿ, ಎನ್.ಇ. ಜೀವನಮೂರ್ತಿ ಭಾಗಹಿಸಲಿದ್ದಾರೆ.

# ನಗರದಲ್ಲಿ ಹೆಚ್ಚುತ್ತಿರುವ ಅಪಘಾತಗಳಿಗೆ ಮುಕ್ತಿ ಎಂದು ?



ದಾವಣಗೆರೆ, ಡಿ.18- ನಗರ ದಲ್ಲಿ ಈಚೆಗೆ ರಸ್ತೆ ಅಪಘಾತಗಳು ಹೆಚ್ಚುತ್ತಿವೆ. ಅಮಾಯಕರು, ವಾಯು ವಿಹಾರ ಹೊರಟವರು, ದ್ವಿಚಕ್ರ ವಾಹನದಲ್ಲಿ ತೆರಳುವವರು, ಆಯ ತಪ್ಪಿ ಬಿದ್ದವರು ಸಾಯುತ್ತಿರುವುದು ದಿನನಿತ್ಯ ವರದಿಯಾಗುತ್ತಲೇ ಇವೆ. ಪೊಲೀಸರು ಈ ಬಗ್ಗೆ ಗಮನ ಹರಿಸಿ, ಸಾವುಗಳನ್ನು ತಡೆಯುವುದು ಒಳ್ಳೆಯದು ಎಂದು ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷ ಹಾಗೂ ಮಾಜಿ ನಗರಸಭೆ ಅಧ್ಯಕ್ಷ ಬಿ. ವೀರಣ್ಣ ಮನವಿ ಮಾಡಿದ್ದಾರೆ.

ಕಳೆದ ಒಂದು ತಿಂಗಳಲ್ಲಿ ನಗರದಲ್ಲಿ ಮೂರು ರಸ್ತೆ ಅಪಘಾತಗಳು ನಡೆದು ಮೂವರು ಸಾವನ್ನಪ್ಪಿದ್ದಾರೆ. ಎಸ್.ಎಸ್.ಬಡಾವಣೆಯ ರಿಂಗ್ ರಸ್ತೆಯಲ್ಲಿ ಕಾಂಟ್ರಾಕ್ಟರ್ ಮಂಜುನಾಥ್ ಬೆಳಿಗ್ಗೆ ವಾಯುವಿಹಾರ ಹೋಗುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದು ಸಾವು ಸಂಭವಿಸಿದೆ. ಮೊನ್ನೆ ನಗರದ ಎಂ.ಸಿ. ಕಾಲೋನಿಯಲ್ಲಿ ಕಾರು ಡಿಕ್ಕಿ ಹೊಡೆದು ದಂತ ವೈದ್ಯ ವಿದ್ಯಾರ್ಥಿನಿ ಸಾವನ್ನಪ್ಪಿದ್ದಾರೆ. ಇಂದು ಶನಿವಾರ ರೇಣುಕಾಮಂದಿರ ಬಳಿ ಟಿಪ್ಪರ್ ಲಾರಿ ಡಿಕ್ಕಿ ಹೊಡೆದು ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಈ ಸಾವುಗಳಿಗೆ ಕೊನೆ ಯಾವಾಗ ? ಎಂದು ವೀರಣ್ಣ ಪ್ರಶ್ನಿಸಿದ್ದಾರೆ.

ರೇಣುಕ ಮಂದಿರದ ಬಳಿ ಟ್ರಾಫಿಕ್ ಸಮಸ್ಯೆ ಭಯಾನಕವಾಗಿದೆ. ವಾಹನ ಸವಾರರು ಬೇಕಾಬಿಟ್ಟಿ ತಿರುವು ತೆಗೆದುಕೊಳ್ಳುವುದು, ಅಂಡರ್‌ಪಾಸ್ ಕಡೆಗೆ ನುಗ್ಗುವುದರಿಂದ ಇಂತಹ ಅಪಘಾತಗಳಾಗುತ್ತಿವೆ.

ರಿಂಗ್ ರಸ್ತೆಯಲ್ಲಿ ವಾಹನಗಳ ವೇಗ ಮಿತಿ ಮೀರಿದೆ. ಅಲ್ಲಿ ಪೊಲೀಸರು ಇರುವುದೇ ಇಲ್ಲ. ಇಲ್ಲಿ ರಸ್ತೆಗಳಲ್ಲಿ ವೇಗ ನಿಯಂತ್ರಕ (ಹಂಪ್ಸ್) ಗಳನ್ನು ಹಾಕುವುದು ಒಳಿತು.

ಕುಂದುವಾಡ ಕೆರೆ ಬಳಿಯಿಂದ ಡಿಸಿ ಕಚೇರಿ, ಪಿ.ಬಿ.ರಸ್ತೆವರೆಗೆ ಡಬಲ್ ರಸ್ತೆ ಮಾಡಲಾಗಿದೆ. ಆದರೆ ಅಲ್ಲಿ ಬೀದಿ ದೀಪಗಳೇ ಇಲ್ಲ. ರಾತ್ರಿ ಸಮಯದಲ್ಲಿ ದನ - ಕರುಗಳು, ಕುರಿ - ಮೇಕೆಗಳು ರಸ್ತೆಯಲ್ಲೇ ಸಾಗುತ್ತಿರುತ್ತವೆ. ಕತ್ತಲಲ್ಲಿ ಕಾಣದೇ ಎಷ್ಟೋ ಬೈಕ್ ಸವಾರರು ಅಪಘಾತ ಮಾಡಿಕೊಂಡಿದ್ದಾರೆ.

ಇದಲ್ಲದೇ ಕೆಲ ಪುಂಡ ಯುವಕರು ತ್ರಿಬಲ್ ರೈಡಿಂಗ್ ಮಾಡುವುದು, ಕರ್ಕಶ ಹಾರನ್ ಮಾಡುವುದು, ವೇಗವಾಗಿ ನುಗ್ಗುವುದು, ಹೆಲ್ಮೆಟ್ ಹಾಕದಿರುವುದು ಇದೆಲ್ಲಾ ಮಾಡುತ್ತಿರುವುದರಿಂದ ಅಪಘಾತಗಳಾಗುತ್ತಿವೆ. ಇದೆಲ್ಲಕ್ಕೂ ಪೊಲೀಸರು ಕಡಿವಾಣ ಹಾಕಬೇಕೆಂದು ವೀರಣ್ಣ ಒತ್ತಾಯಿಸಿದ್ದಾರೆ.

# ದೀಕ್ಷಿತ್ ರಸ್ತೆಯ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಇಂದು ಕಾರ್ತಿಕ

ದೀಕ್ಷಿತ್ ರಸ್ತೆಯ ವರಸಿದ್ಧಿ ಏಕದಂತ ವಿನಾಯಕ ದೇವಸ್ಥಾನದಲ್ಲಿ ಇಂದು ಕಡೇ ಕಾರ್ತಿಕ ನಡೆಯಲಿದೆ. ಬೆಳಿಗ್ಗೆ ಬೆಳ್ಳಿ ಅಲಂಕಾರ, ರುದ್ರಾಭಿಷೇಕ, ವಿಶೇಷ ಪೂಜೆ, ಸಂಜೆ 6.30 ರಿಂದ ದೇವಸ್ಥಾನದ ಆವರಣದಲ್ಲಿ ಕಡೇ ಕಾರ್ತಿಕ ಮಹೋತ್ಸವ, 7.15ಕ್ಕೆ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಅಧ್ಯಕ್ಷ ಎನ್.ಕೆ.ಸೋಮಶೇಖರಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಜಿ.ಶಿವಕುಮಾರ್ ಕೋರಿದ್ದಾರೆ.

# ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ

ನಾಡದ್ರೋಹಿ ಎಂ.ಇ.ಎಸ್. ನವರೇ ಕರ್ನಾಟಕ ಬಿಟ್ಟು ತೊಲಗಿ ಬೃಹತ್ ಪ್ರತಿಭಟನೆ ಇಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ.

# ನಾಡ ಧ್ವಜ ಸುಟ್ಟ ದ್ರೋಹಿಗಳಿಗೆ ಕಠಿಣ ಶಿಕ್ಷೆ ವಿಧಿಸಿ : ಟಾರ್ಗೆಟ್ ಅಸ್ಲಾಂ



ದಾವಣಗೆರೆ, ಡಿ.18- ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟ ಸುಟ್ಟು ವಿಕೃತಿ ಮೆರೆದಿರುವ ಎಂಇಎಸ್ ಹಾಗೂ ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ, ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಟಾರ್ಗೆಟ್ ಅಸ್ಲಾಂ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ಕರ್ನಾಟಕದಲ್ಲಿ ನಿಷೇಧಿಸಬೇಕು. ಭಾಷಾ ಸಾಮರಸ್ಯಕ್ಕೆ ಧಕ್ಕೆ ತರುತ್ತಿರುವ ಎಂಇಎಸ್ ಮುಖಂಡರನ್ನು ರಾಜ್ಯದಿಂದ ಗಡಿ ಪಾರು ಮಾಡಬೇಕು. ಕನ್ನಡ ನಾಡು, ನುಡಿ, ಧ್ವಜಕ್ಕೆ ಅವಮಾನ ಮಾಡುವವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ, ಶಿಕ್ಷಿಸಬೇಕು. ರಾಯಣ್ಣ ಪ್ರತಿಮೆ ವಿರೂಪಗೊಳಿಸಿರುವವರ ವಿರುದ್ಧ ಕ್ರಮ ಜರುಗಿಸಲು ಆಗ್ರಹಿಸಿದ್ದಾರೆ.

SHREE VEERABHADRESHWARA CONSULTANCY SERVICES
CIVIL ENGINEERS AND DEVELOPERS
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422
WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS

REQUIRED
A progressive "Agro Based Food Processing Industry" seek the following employment.
1. Receptionist - Any degree
2. Admin Assistant - Any degree
3. Lab Chemist - B.Sc/M.Sc.,
Candidates with computer knowledge and good communication skills, salary will commensurate with the qualification and experience, preference will be given for experienced candidates.
Fresher's can also apply
The manager, HR
Green Agro Pack Pvt Ltd.,
P.B. Road, Hebbalu Village, Davanagere (T&D)
Ph-8197446931, 7204778955
EMail:hr@greenagro.com

## ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ಹಾಗೂ ಸಿ.ಜೆ.ಎಂ. ನ್ಯಾಯಾಲಯದಲ್ಲಿ, ದಾವಣಗೆರೆ

ಕ್ರಿಮಿನಲ್ ಮಿಸ್ ನಂ. 110 / 2021

ಅರ್ಜಿದಾರರು : **ಶ್ರೀಮತಿ ಕಲ್ಲಮ್ಮ ಕೋಂ ಬಸವರಾಜಪ್ಪ**, ವಯಸ್ಸು ಸುಮಾರು 45 ವರ್ಷ, ವ್ಯವಸಾಯಗಾರರು, ವಾಸ : ಐಗೂರು ಗ್ರಾಮ ಮತ್ತು ಅಂಚೆ, ದಾವಣಗೆರೆ ತಾಲ್ಲೂಕು/ ಜಿಲ್ಲೆ.

ವಿರುದ್ಧ

ಎದುರುದಾರರು : **ಮಾನ್ಯ ತಹಸೀಲ್ದಾರ್**, ದಾವಣಗೆರೆ ತಾಲ್ಲೂಕು, ದಾವಣಗೆರೆ

**- ಸಾರ್ವಜನಿಕ ಪ್ರಕಟಣೆ -**

ದಿನಾಂಕ: 10-11-1985 ರಂದು ದಾವಣಗೆರೆ ತಾಲ್ಲೂಕ್ ಐಗೂರು ಗ್ರಾಮದಲ್ಲಿ ಫೌತಿಯಾದ ಅರ್ಜಿದಾರರ ಅಜ್ಜಿ **ಶ್ರೀಮತಿ ಕಲ್ಲಮ್ಮ ಕೋಂ. ರಾಮಪ್ಪ** ಇವರ ಮರಣದ ವಿವರಗಳನ್ನು ಎದುರುದಾರ ಕಾರ್ಯಾಲಯದವರು ದಾಖಲಿಸಿಕೊಂಡು ಮರಣ ಪ್ರಮಾಣ ಪತ್ರವನ್ನು ವಿತರಿಸುವ ಬಗ್ಗೆ ಪ್ರಾರ್ಥಿಸಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯದ ಸಭಾಂಗಣದಲ್ಲಿ ದಿನಾಂಕ : 13.01.2022 ರಂದು ಬೆಳಿಗ್ಗೆ 11-00 ಗಂಟೆಗೆ ನಿಗದಿಪಡಿಸಿದ್ದು, ಆಕ್ಷೇಪಣೆಯುಳ್ಳವರಿದ್ದಲ್ಲಿ ಅಂತಹವರು ಸದರಿ ಮುದ್ದತ್ತಿನಲ್ಲಿ ಖುದ್ದು ಅಥವಾ ವಕೀಲರ ಮೂಲಕ ಕೋವಿಡ್-19ರ ನಿಯಮಾವಳಿಗಳನ್ನು ಅನುಸರಿಸಿ ಹಾಜರಿದ್ದು ಸಲ್ಲಿಸಬಹುದು. ತಪ್ಪಿದಲ್ಲಿ ಕ್ರಮಾನುಸಾರ ಅರ್ಜಿದಾರರ ಪರ ಆದೇಶಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 18ನೇ ಡಿಸೆಂಬರ್ 2021 ರಂದು ಹೊರಡಿಸಲ್ಪಟ್ಟಿದೆ.

*ನ್ಯಾಯಾಲಯದ ಆದೇಶದ ಮೇರೆಗೆ,*

**ಶಿರಸ್ತೇದಾರರು,**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಲಯ, ದಾವಣಗೆರೆ

**ಎಸ್. ನಾಗರಾಜ್** (ಆನೆಕೊಂಡ)
ಅರ್ಜಿದಾರರ ಪರ ವಕೀಲರು,
ದಾವಣಗೆರೆ. ಮೊ: **98443 10449**

ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.
ಸಂಪರ್ಕಿಸಿ :
ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400
ಮೂರ್ತಿ ಜಿ.ಎಸ್.ಡಿ., ಇಂಜಿನಿಯರ್
+91 98445 69698
2ನೇ ಮೇನ್, ಪಿ.ಜೆ. ಬಡಾವಣೆ, ಸಿ.ಜಿ. ಆಸ್ಪತ್ರೆ ರಸ್ತೆ, ವಿಜಯ ಹೋಟೆಲ್ ಎದುರು, ದಾವಣಗೆರೆ-4.

# ಪುನೀತ್ ಪುತ್ಥಳಿ ಆವರಣದಲ್ಲಿ ಗಣಹೋಮ

ನಗರದ ಚಿಕ್ಕಮಣ್ಣಿ ದೇವರಾಜ್ ಅರಸ್ ಬಡಾವಣೆಯ ಶ್ರೀ ಸಿದ್ದರಾಮೇಶ್ವರ ವೃತ್ತದಲ್ಲಿ ಅಪ್ಪು ಅಭಿಮಾನಿ ಬಳಗದಿಂದ ಪುನೀತ್ ರಾಜ್‌ಕುಮಾರ್‌ರವರ ಪುತ್ಥಳಿ ಅನಾವರಣದಲ್ಲಿ ಗಣ ಹೋಮ, ಮೃತ್ಯುಂಜಯ ಹೋಮ, ಸುದರ್ಶನ ಹೋಮ ಏರ್ಪಡಿಸಲಾಗಿದೆ. ವರಸಿದ್ದಿವಿನಾಯಕ ಸೇವಾ ಸಂಘದ ಅಧ್ಯಕ್ಷ ಕೆ.ಹೆಚ್. ರೇವಣಸಿದ್ದಪ್ಪ ದಂಪತಿ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ.

# ಕೊಮಾರನಹಳ್ಳಿ : ಇಂದು ಕನಕ ಜಯಂತಿ



ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ 534ನೇ ಕನಕ ಜಯಂತ್ಯೋತ್ಸವವನ್ನು ಇಂದು ಕಾಗಿನೆಲೆ ಶ್ರೀಗಳ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9 ಗಂಟೆಗೆ ಬೈಕ್ ರ್‍ಯಾಲಿ, ಮಧ್ಯಾಹ್ನ 12 ಗಂಟೆಗೆ ಕನಕದಾಸರ ಮೂರ್ತಿಗೆ ಮಾಲಾರ್ಪಣೆ ನಂತರ ಅನ್ನ ಸಂತರ್ಪಣೆ ಮತ್ತು ಸಂಜೆ 6 ಕ್ಕೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನಕ ಬ್ರಿಗೇಡ್‌ನ ಜಿ.ಎಂ. ಸುನೀಲ್, ಯು. ಅಣ್ಣಪ್ಪ ತಿಳಿಸಿದ್ದಾರೆ.

ಇನ್ವೆಸ್ಟರ್ಸ್ ಬೇಕಾಗಿದ್ದಾರೆ
18 ಎಕರೆ ಅಲಿನೇಷನ್ ಹಾಗೂ ಅಪ್ರೂವಲ್ ಆಗಿ ವಿದ್ಯುತ್ ಸೌಕರ್ಯವಿದ್ದು, ಇನ್ನೂ ಮುಂದಿನ ಸೌಕರ್ಯಗಳನ್ನು ಮಾಡಿಸಬೇಕಾಗಿರುವ ಲೇಔಟ್‌ಗೆ ರೂ 2 ರಿಂದ 3 ಕೋಟಿವರೆಗೆ ಹಣದ ಅವಶ್ಯಕತೆಯಿದ್ದು, ಇದಕ್ಕೆ ನಮಗೆ ಇನ್ವೆಸ್ಟರ್ಸ್ ಬೇಕಾಗಿದ್ದಾರೆ. ಇಚ್ಚೆಯುಳ್ಳ ಆಸಕ್ತ ವ್ಯಕ್ತಿಗಳು ಸಂಪರ್ಕಿಸಿ
ಶಬರಿಗಿರಿ ರಿಯಲ್ ಎಸ್ಟೇಟ್, ದಾವಣಗೆರೆ
ಮೊ: 91081 35575

## ದಿ ದಾವಣಗೆರೆ ಕ್ಲಬ್ (ರಿ.)

ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**2020-2021ನೇ ಸಾಲಿನ ವಾರ್ಷಿಕ ಮಹಾಸಭೆ**

**ಮಾನ್ಯ ಸದಸ್ಯರುಗಳ ಗಮನಕ್ಕೆ**

ದಿನಾಂಕ : 19.12.2021ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ 2020-21ರ ವಾರ್ಷಿಕ ಮಹಾಸಭೆಯನ್ನು ಕರೆಯಲಾಗಿದೆ. ಸದಸ್ಯರುಗಳು ಸರಿಯಾದ ವೇಳೆಗೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

**ಸಭೆ ಮುಗಿದ ನಂತರ ಮಧ್ಯಾಹ್ನ ಊಟದ ವ್ಯವಸ್ಥೆ ಇರುತ್ತದೆ.**

**ಆಡಳಿತ ಮಂಡಳಿ**
**ದಾವಣಗೆರೆ ಕ್ಲಬ್, ದಾವಣಗೆರೆ.**

ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ
ದೇರಳಕಟ್ಟೆ, ಮಂಗಳೂರು. ಫೋನ್: 0824-2204668/69/70


ಹರಿಹರ ನಗರದಲ್ಲಿ ಆರಂಭಗೊಳ್ಳುತ್ತಿರುವ
ಯೆನೆಪೋಯ ಆರೋಗ್ಯ ಕೇಂದ್ರದ ಉದ್ಘಾಟನೆ ಸಮಾರಂಭಕ್ಕೆ ಸರ್ವರಿಗೂ ಆದರದ ಸ್ವಾಗತ
ಡಾ. ಪ್ರಕಾಶ್ ಆರ್.ಎಂ. ಸಾಲ್ಡಾನ, ವೈದ್ಯಕೀಯ ಅಧೀಕ್ಷಕರು, ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು
ದಿನಾಂಕ : 19ನೇ ಡಿಸೆಂಬರ್ 2021 ಸಮಯ: 10 ಗಂಟೆಗೆ
ಸ್ಥಳ : ಸಿದ್ದೇಶ್ವರ ಸಂಕೀರ್ಣ, ಶಿವಮೊಗ್ಗ ರೋಡ್, ಹರಿಹರ
ಉದ್ಘಾಟನೆ : ಶ್ರೀಯುತ ಎಸ್. ರಾಮಪ್ಪ, ಶಾಸಕರು ಹರಿಹರ
ಮುಖ್ಯ ಅತಿಥಿಗಳು: ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕರು, ಹರಿಹರ, ಬಿ.ಪಿ. ಹರೀಶ್, ಮಾಜಿ ಶಾಸಕರು, ಹರಿಹರ
ಶ್ರೀಮತಿ ರತ್ನಮ್ಮ ಡಿ. ಉಜ್ಜೇಶ್ ಅಧ್ಯಕ್ಷರು, ನಗರಸಭೆ, ಹರಿಹರ, ಡಾ. ನಾಗರಾಜ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ದಾವಣಗೆರೆ.
ಡಾ. ಚಂದ್ರ ಮೋಹನ್, ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಹರಿಹರ
ಶ್ರೀ ಯುತ ಡಿ.ಹೇಮಂತ್ ರಾಜ್ ಬ್ರದರ್ಸ್ ಅಂಡ್ ಸನ್ಸ್, ಸಿದ್ದೇಶ್ವರ ಸಂಕೀರ್ಣ, ಹರಿಹರ
ಗೌರವ ಉಪಸ್ಥಿತಿ: ಡಾ. ಇಬ್ರಾಹಿಂ ನಾಗನೂರು, ಮುಖ್ಯಸ್ಥರು, ಸಾರ್ವಜನಿಕ ಆರೋಗ್ಯ ವಿಭಾಗ ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು
ಡಾ. ನಾಗರಾಜ ಶೇಟ್, ಸಹಾಯಕ ವೈದ್ಯಕೀಯ ಅಧೀಕ್ಷಕರು, ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು
ಶ್ರೀಯುತ ವಿಜಯಾನಂದ ಶೆಟ್ಟಿ, ಸೀನಿಯರ್ ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್, ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು
ಶ್ರೀಯುತ ಮೊಹಮ್ಮದ್ ಆಶ್ರಫ್, ಚೀಫ್ ಫಾರ್ಮಾಸಿಸ್ಟ್, ಯೆನೆಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ, ಮಂಗಳೂರು
ಸೇವೆಗಳು: ♦ ಕ್ಲಿನಿಕ್ ♦ ಪ್ರಯೋಗಾಲಯ ♦ ಟೆಲಿಮೆಡಿಸಿನ್ ವಿಭಾಗ ♦ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ ♦ ಔಷಧಾಲಯ



## 24ರಂದು ತುಳಜಾಭವಾನಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವ

ದಾವಣಗೆರೆ, ಡಿ. 18- ನಗರದ ಕೆ.ಟಿ.ಜೆ. ನಗರ, 11ನೇ ಮತ್ತು 12ನೇ ಕ್ರಾಸ್, 3ನೇ ಮುಖ್ಯರಸ್ತೆಯಲ್ಲಿರುವ ಶ್ರೀ ತುಳಜಾಭವಾನಿ ದೇವಸ್ಥಾನದಲ್ಲಿ ಇದೇ ದಿನಾಂಕ 24ರ ಶುಕ್ರವಾರ ಸಂಜೆ 6.30ಕ್ಕೆ ಕಡೇ ಕಾರ್ತೀಕ ಮಹೋತ್ಸವ ಏರ್ಪಡಿಸಲಾಗಿದೆ.



## ಆನೆಕೊಂಡದಲ್ಲಿ ಇಂದು ಶ್ರೀ ಬಸವೇಶ್ವರ ಕಾರ್ತಿಕ

ದಾವಣಗೆರೆಯ ಸುಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿಯ ಕಾರ್ತಿಕ ದೀಪೋತ್ಸವವು ನಾಡಿದ್ದು ದಿನಾಂಕ 19ರ ಭಾನುವಾರ ರಾತ್ರಿ 9 ಗಂಟೆಗೆ ನಡೆಯಲಿದೆ. ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸಲು ವಿನಂತಿ.

## ನಾಳೆ ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ



ದಾವಣಗೆರೆ, ಡಿ.18- ನಗರದ ಮಾಗಾನಹಳ್ಳಿ ರಸ್ತೆಯ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 20 ರ ಸೋಮವಾರ ಸಂಜೆ 6 ಗಂಟೆಗೆ ಕಡೇ ಕಾರ್ತಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 6ಕ್ಕೆ ರುದ್ರಾಭಿಷೇಕ, ಮಹಾಪ್ರಸಾದ ಏರ್ಪಡಿಸಲಾಗಿದೆ. ಸಂಜೆ 6 ಕ್ಕೆ ಕಾರ್ತಿಕ ನಡೆಯಲಿದೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜೆ. ಬಕ್ಕೇಶಪ್ಪ (94483 56968), ಬಿ. ಚಿದಾನಂದಪ್ಪ (98445 28449, ಮಲ್ಲಾಬಾದಿ ಗುರುಬಸವರಾಜು (79757 97079) ಅವರನ್ನು ಸಂಪರ್ಕಿಸಬಹುದು.

## ಬಿ.ಕಲಪನಹಳ್ಳಿಯಲ್ಲಿಂದು ಶರಣ ಬಸಪ್ಪಜ್ಜರ ಕಾರ್ತಿಕ



ದಾವಣಗೆರೆ ತಾಲ್ಲೂಕು ಬಿ.ಕಲಪನಹಳ್ಳಿಯ ಶ್ರೀ ಶರಣ ಬಸಪ್ಪ ಜ್ಜನವರ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ.

## ನಗರದಲ್ಲಿಂದು ಕಾನೂನು ಕಾರ್ಯಾಗಾರ

ಅಖಿಲ ಭಾರತೀಯ ಅಧಿವಕ್ತಾ ಪರಿಷತ್‌ನ ಜಿಲ್ಲಾ ಘಟಕದಿಂದ ಸಂವಿಧಾನ ಹಾಗೂ ವಕೀಲರ ದಿನಾಚರಣೆ ಅಂಗ ವಾಗಿ ಇಂದು ಬೆಳಿಗ್ಗೆ 10.30 ಕ್ಕೆ ರೋಟರಿ ಬಾಲಭವನದಲ್ಲಿ ಕಾರ್ಯಾಗಾರ ನಡೆಯಲಿದೆ.

ಪ್ರಾಸ್ತಾವಿಕ ನುಡಿಯನ್ನು ವೈ. ಮಂಜಪ್ಪ ಕಾಕನೂರು ನಡೆಸಿಕೊಡುವರು. ಪರಿಷತ್ತಿನ ಜಿಲ್ಲಾಧ್ಯಕ್ಷರೂ ಆದ ಹಿರಿಯ ವಕೀಲ ಎಲ್. ದಯಾನಂದ ಅಧ್ಯಕ್ಷತೆ ವಹಿಸುವರು. ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯ ಮೂರ್ತಿಗಳಾದ ಬಿ. ಎಂ. ಶ್ಯಾಮ್‌ಪ್ರಸಾದ್ ವಿಶೇಷ ಉಪನ್ಯಾಸ ನೀಡುವರು. ಅತಿಥಿಗಳಾಗಿ ಜಿಲ್ಲಾ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ವಕೀಲರಾದ ರವೀಂದ್ರನಾಥ್, ಡಿ.ಪಿ. ಬಸವರಾಜ್ ಆಗಮಿಸುವರು.

## ಕಡ್ಲೇಬಾಳ್ : ಇಂದು ಮಧ್ವಾಂಜನೇಯ ಕಾರ್ತಿಕೋತ್ಸವ



ಕಡ್ಲೇಬಾಳು ಶ್ರೀ ಮಧ್ವಾಂಜನೇಯ ಸ್ವಾಮಿ ಕಾರ್ತಿಕೋತ್ಸವ ಇಂದು ಸಂಜೆ 7 ಗಂಟೆಗೆ ನಡೆಯಲಿದೆ ಎಂದು ಗ್ರಾಮ ಪಂಚಾಯ್ತಿ ಸದಸ್ಯರಾದ ಶ್ರೀಮತಿ ರೂಪ ಧನಂಜಯ ಕಡ್ಲೇಬಾಳ್ ತಿಳಿಸಿದ್ದಾರೆ.


# ಸ್ಥಳ ಬದಲಾವಣೆ

## ಸೌಂಡ್ ಹೆಲ್ತ್

### ಡಯಗ್ನೋಸ್ಟಿಕ್ ಅಲ್ಟ್ರಾಸೌಂಡ್ ಸೆಂಟರ್




ದಿನಾಂಕ : 20.12.2021 ರಂದು ಸೋಮವಾರದಿಂದ ನಮ್ಮ ಅಲ್ಟ್ರಾ ಸೌಂಡ್ ಹೆಲ್ತ್ ಸೆಂಟರ್‌ನ ಸೇವೆಗಳನ್ನು ಈ ಕೆಳಕಂಡ ಬದಲಾದ ವಿಳಾಸದಲ್ಲಿ ಪಡೆಯಬಹುದು.

ಡಾ|| ಜಿ.ಎಂ. ರಾಜಶೇಖರ ಡಾ|| ಲಕ್ಷ್ಮೀ ರಾಜಶೇಖರ

# 3366/1-A, ಶಾಮನೂರು ರಸ್ತೆ
ಅಪೋಲೋ ಫಾರ್ಮಸಿ ಹತ್ತಿರ, ದಾವಣಗೆರೆ.
ಫೋನ್ : 63629 28128



# ಶಿವ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಪ್ರಧಾನ ಕಛೇರಿ : ಮಲೇಬೆನ್ನೂರು. ಶಾಖೆ : ಹೊಳೆಸಿರಿಗೆರೆ.

## 15ನೇ ವಾರ್ಷಿಕ ಸರ್ವ ಸದಸ್ಯರ ಸಭೆ

ನಮ್ಮ ಸಹಕಾರ ಸಂಘದ 2020-2021ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 20.12.2021 ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ವಾಸವಿ ಕಲ್ಯಾಣ ಮಂಟಪ, ನಂದಿಗುಡಿ ರಸ್ತೆ, ಮಲೇಬೆನ್ನೂರಿನಲ್ಲಿ ಸಂಘದ ಅಧ್ಯಕ್ಷರಾದ ಡಾ|| ಬಿ. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದ ಕಾರಣ ಮಾನ್ಯ ಸದಸ್ಯರೆಲ್ಲರೂ ವೇಳೆಗೆ ಸರಿಯಾಗಿ ಸಭೆಗೆ ಆಗಮಿಸುವಂತೆ ವಿನಂತಿ.

ವಿಶೇಷ ಆಹ್ವಾನಿತರು : ಶ್ರೀ ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿಗಳು, ದಾವಣಗೆರೆ.

ಅತಿಥಿಗಳು : ಶ್ರೀ ಎನ್.ಜಿ. ರುದ್ರಪ್ಪ, ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಹರಿಹರ.

### ಸಂಘದ ಪ್ರಗತಿಯ ಪಕ್ಷಿನೋಟ

| ವಿವರಗಳು | 2018-19 | 2019-20 | 2020-21 |
|---|---|---|---|
| 1) ಸದಸ್ಯರು | 2884 | 2947 | 3150-00 |
| 2) ಪಾಲು ಧನ | 73,02,133-00 | 57,47,425-00 | 56,02,425-00 |
| 3) ನಿಧಿಗಳು | 1,66,28,436-73 | 1,87,06,633-88 | 2,03,94,927-38 |
| 4) ಠೇವಣಿಗಳು | 3,74,37,657-86 | 5,43,31,512-06 | 6,19,91,477-06 |
| 5) ಸಾಲಗಳು | 4,65,33,239-00 | 5,38,30,570-00 | 6,18,95,290-00 |
| 6) ನಿವ್ವಳ ಲಾಭ | 26,67,254-15 | 14,17,728-50 | 25,24,418-21 |
| 7) ಲೆಕ್ಕ ಪರಿಶೋಧನೆ ವರ್ಗ | 'ಬಿ' | 'ಬಿ' | 'ಬಿ' |

ಸರ್ವ ಸದಸ್ಯರಿಗೂ ಆದರದ ಸುಸ್ವಾಗತ ಬಯಸುವವರು : ಆಡಳಿತ ಮಂಡಳಿಯ ಸದಸ್ಯರು



ದಿ. ಹೆಚ್.ಜಿ. ಗುರುಸಿದ್ದಪ್ಪ, ಸಂಸ್ಥಾಪಕರು, ಮಲೇಬೆನ್ನೂರು; ಡಾ|| ಬಿ. ಚಂದ್ರಶೇಖರ್, ಅಧ್ಯಕ್ಷರು, ಮಲೇಬೆನ್ನೂರು; ಜಿ. ಆಂಜನೇಯ, ಉಪಾಧ್ಯಕ್ಷರು, ಯಲವಟ್ಟಿ; ಬಿ. ವಿರೂಪಾಕ್ಷಪ್ಪ, ನಿರ್ದೇಶಕರು, ಹನಗವಾಡಿ; ಜಿ. ದ್ಯಾಮಣ್ಣ, ನಿರ್ದೇಶಕರು, ಕೊಕ್ಕನೂರು; ಹೆಚ್.ಜಿ. ಚಂದ್ರಶೇಖರ್, ನಿರ್ದೇಶಕರು, ಮಲೇಬೆನ್ನೂರು; ಜಿ.ಎಸ್. ರವಿಶಂಕರ್, ನಿರ್ದೇಶಕರು, ಬೆಳ್ಳೂಡಿ



ಹೆಚ್.ಬಿ. ಶಿವಕುಮಾರ್, ನಿರ್ದೇಶಕರು, ಕುಂಬಳೂರು; ಕೆ.ಎಸ್. ರಂಗನಾಥ್, ನಿರ್ದೇಶಕರು, ಮಲೇಬೆನ್ನೂರು; ಶ್ರೀಮತಿ ಸರೋಜಮ್ಮ, ನಿರ್ದೇಶಕರು, ಮಲೇಬೆನ್ನೂರು; ಶ್ರೀಮತಿ ಬಿ.ಜಿ. ನಾಗರತ್ನ, ನಿರ್ದೇಶಕರು, ನಿಟ್ಟೂರು; ಸಿ. ಸುರೇಶಾಚಾರ್, ನಿರ್ದೇಶಕರು, ಹರಳಹಳ್ಳಿ; ಎನ್.ಎಲ್. ಪ್ರಕಾಶ್, ನಿರ್ದೇಶಕರು, ಜಿಗಳಿ; ಬಿ. ಶೇಖರಪ್ಪ, ನಿರ್ದೇಶಕರು, ಹೊಳೆಸಿರಿಗೆರೆ

ವಿ.ಸೂ. : ಆಹ್ವಾನ ಪತ್ರಿಕೆ ತಲುಪದ ಸದಸ್ಯರುಗಳು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ. ಮಹಾಸಭೆಗೆ ಆಗಮಿಸುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಹಾಗೂ ಸಭೆಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕಾಗಿ ವಿನಂತಿ.



ಸಹಕಾರವೇ ಜೀವನ | ಸ್ಥಾಪನೆ : 1983 | ಜೀವನವೇ ಸಹಕಾರ

# ದಿ ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ರಜತ ಮಹೋತ್ಸವ ಕಟ್ಟಡ, ಶಿವಮೊಗ್ಗ ರಸ್ತೆ, ಹರಿಹರ - 577 601. ದೂರವಾಣಿ : 243108

## ಸಂಘದ 37ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆಹ್ವಾನ

## ಜಿಲ್ಲೆಯಲ್ಲಿಯೇ ಸಹಕಾರ ಸೊಸೈಟಿಯು ಪ್ರಥಮ ಶ್ರೇಣಿಯಲ್ಲಿ 3 ಕೋಟಿ 32 ಲಕ್ಷ ಲಾಭ ಗಳಿಸಿದೆ

ಸಂಘದ 37ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 19.12.2021ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀಮತಿ ಕೆಂಚಮ್ಮ ಶ್ರೀ ಹೆಚ್.ಕೆ. ವೀರಪ್ಪ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಹೇಮಂತ್‌ರಾಜ್ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

## ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರು



ಶ್ರೀ ಡಿ. ಹೇಮಂತರಾಜ್, ಅಧ್ಯಕ್ಷರು; ಶ್ರೀ ಆರ್.ಕೆ. ಮಂಜುನಾಥ, ಉಪಾಧ್ಯಕ್ಷರು; ಶ್ರೀ ಎಂ. ಶಿವಾನಂದಪ್ಪ, (ಸಂಸ್ಥಾಪಕ ಅಧ್ಯಕ್ಷರು), ನಿರ್ದೇಶಕರು; ಶ್ರೀ ಜಿ.ಎಸ್. ಚನ್ನಬಸಪ್ಪ, ನಿರ್ದೇಶಕರು; ಶ್ರೀ ಸೈಯದ್ ಇಫ್ತೇಕಾರ್ ಅಹ್ಮದ್, ನಿರ್ದೇಶಕರು



ಶ್ರೀ ಬಿ. ಮಂಜಪ್ಪ, ನಿರ್ದೇಶಕರು; ಶ್ರೀ ಪಿ. ಶಿವಣ್ಣ, ನಿರ್ದೇಶಕರು; ಶ್ರೀ ಎಂ. ಹನುಮಂತಪ್ಪ, ನಿರ್ದೇಶಕರು; ಶ್ರೀ ಪ್ರಕಾಶ್ ದಿವಟೆ, ನಿರ್ದೇಶಕರು; ಶ್ರೀ ಕೆ.ಬಿ. ಮಂಜುನಾಥ್, ನಿರ್ದೇಶಕರು; ಶ್ರೀ ಸಂಜಯ್ ಮಂಜುನಾಥ್, ನಿರ್ದೇಶಕರು



ಶ್ರೀಮತಿ ಎಲ್.ಪಿ. ಮಮತ, ನಿರ್ದೇಶಕರು; ಶ್ರೀಮತಿ ಎ.ಬಿ. ಗಂಗಮ್ಮ, ನಿರ್ದೇಶಕರು; ರುದ್ರೇಶ್ ಕೆ.ವಿ., ವಿಶೇಷ ಆಹ್ವಾನಿತರು; ಶ್ರೀ ಶಿವಪ್ರಕಾಶ್ ಶಾಸ್ತ್ರಿ, ವಿಶೇಷ ಆಹ್ವಾನಿತರು; ಶ್ರೀ ಬಿ.ಜಿ. ಶರತ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

### 31.3.2021ಕ್ಕೆ ಇದ್ದಂತೆ ಪ್ರಗತಿಯ ಪಕ್ಷಿನೋಟ

| ಕ್ರ.ಸಂ. | ವಿವರಗಳು | ರೂ. ಕೋಟಿಗಳಲ್ಲಿ |
|---|---|---|
| 1. | ಸದಸ್ಯರು | 5,349 |
| 2. | ಷೇರು ಬಂಡವಾಳ | 3.00 |
| 3. | ಠೇವಣಿಗಳು | 47.87 |
| 4. | ಸಾಲಗಳು | 57.03 |
| 5. | ಕಾಯ್ದಿಟ್ಟ ನಿಧಿ | 13.20 |
| 6. | ಲಾಭ | 3.32 |
| 7. | ಡಿವಿಡೆಂಟ್ | ಉದ್ದೇಶಿತ 16% |
| 8. | ಲೆಕ್ಕ ಪರಿಶೋಧಕರ ವರ್ಗ | 'ಎ' |

### ಸಾಲಗಳ ಮೇಲಿನ ಬಡ್ಡಿ ದರಗಳು

| | | |
|---|---|---|
| 1. | ಸ್ಥಿರಾಸ್ತಿ ಆಧಾರಿತ ಹಾಗೂ ನಗದುದ್ದುರಿ ಸಾಲ (ಓ.ಡಿ.) | ಶೇ. 12 |
| 2. | ವಾಹನಾಧಾರಿತ ಸಾಲ : ಹೊಸ ವಾಹನಗಳಿಗೆ, | ಶೇ. 12 |
| | ಹಳೆಯ ವಾಹನಗಳಿಗೆ | ಶೇ. 12 |
| 3. | ಚಿನ್ನಾಭರಣ ಆಧಾರಿತ ಸಾಲ | ಶೇ. 11 |
| 4. | ಜಾಮೀನು ಆಧಾರಿತ ಸಾಲ | ಶೇ. 16 |
| 5. | ವೇತನಾಧಾರಿತ ಸಾಲ | ಶೇ. 16 |
| 6. | ಬಾಂಡ್ ಆಧಾರಿತ ಸಾಲ | ಶೇ. 12 |

### ಠೇವಣಿಗಳ ಮೇಲಿನ ಬಡ್ಡಿ ದರಗಳು

| | |
|---|---|
| 30 ದಿನಗಳ ಮೇಲ್ಪಟ್ಟು 90 ದಿನಗಳವರೆಗೆ | ಶೇ. 5.50 |
| 91 ದಿನಗಳ ಮೇಲ್ಪಟ್ಟು 180 ದಿನಗಳವರೆಗೆ | ಶೇ. 6.50 |
| 181 ದಿನಗಳ ಮೇಲ್ಪಟ್ಟು ಮತ್ತು 12 ತಿಂಗಳವರೆಗೆ | ಶೇ.7.50 |
| 12 ತಿಂಗಳ ಮೇಲ್ಪಟ್ಟು 36 ತಿಂಗಳವರೆಗೆ | ಶೇ 8.00 |
| 36 ತಿಂಗಳ ಮೇಲ್ಪಟ್ಟು 99 ತಿಂಗಳವರೆಗೆ | ಶೇ. 8.50 |

12 ತಿಂಗಳ ಮೇಲ್ಪಟ್ಟ ಠೇವಣಿಗಳಿಗೆ ಹಿರಿಯ ನಾಗರಿಕರಿಗೆ ಶೇ. 0.5 ಹೆಚ್ಚುವರಿ ಬಡ್ಡಿಯನ್ನು ಕೊಡಲಾಗುವುದು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಬೇಕಾಗಿ ವಿನಂತಿ. ಸಭೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಬೇಕಾಗಿ ಕೋರಿದೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte